BROWEN BOOK ONLY

UNIVERSAL LIBRARY
OU_200134
UNIVERSAL LIBRARY

**OSMANIA UNIVERSITY LIBRARY**

Call No. K83 K46N Accession No. K1323

Author [illegible]

Title [illegible] · 1933

This book should be returned on or before the date last marked below.

# ನಾಡ ಕಥೆಗಳು

ಭಾಗ ೧

ಕಿರಿಯರ ಪ್ರಪಂಚ,
ಉಡುಪಿ

## ಕಂಠೀರವ

ಪ್ರತಿ ಮಂಗಳವಾರ
ಪ್ರಕಟವಾಗುವ ಶ್ರೇಷ್ಠ ವರ್ಗದ
ಕನ್ನಡ ನುಡಿಯ

**ವಾರಪತ್ರಿಕೆ**

| | | | |
|---|---|---|---|
| ವಾ। ವರ್ಗಣಿ (ಅಂ. ಸೇರಿ) | 3 | 5 | 0 |
| ೬ ತಿಂಗಳಿಗೆ ,, | 1 | 11 | 0 |

'ಕಂಠೀರವ' ಕಾರ್ಯಾಲಯ,
**ಮಂಗಳೂರು**, ದ. ಕ.

## ಸಂಶಯ ಪಿಶಾಚಿ

(ನವೀನ ಸಾಮಾಜಿಕ ನಾಟಕ)

ವಿನೋದಕರ!
ವಿಚಾರಪರ!!
ವಿಷಾದಕರ!!!

ಹಳೆಯ ಮತ್ತು ಆಧುನಿಕ
ಮನೋವೃತ್ತಿಯ ಮನೋವೇಧಕ ಚಿತ್ರ.

ಬೆಲೆ ೬ ಆಣೆ.

## ಸ್ವತಂತ್ರ ಜೀವನೋಪಾಯ

ಸುಂದರ ನಾಟಕ

ಬೆಲೆ ೨॥ ಆಣೆ.

ಕಾರ್ಯದರ್ಶಿ, ಕಿರಿಯರ ಪ್ರಪಂಚ,
ಉಡುಪಿ, ದ. ಕ.

## ಮುಟ್ಟಿದರೆ
## ಮುಗುಳು!
## ಬಿಟ್ಟಿದರೆ
## ಅರಳು!!

ಶ್ರೀ। ಹೊನ್ನಯ ಶೆಟ್ಟರ
ಕವಿತಾ ಕುಸುಮವದು

# ಮುಗುಳು

ಬೆಲೆ ೨।॥ ಆಣೆ.

ಪಿ. ಎ. ಪೈ, ಬ್ರದರ್ಸ್, ಉಡುಪಿ

(ಕಿರಿಯರ ಪ್ರಪಂಚದ ಪುಸ್ತಕಗಳೂ ಇವರಲ್ಲಿ ಸಿಗುತ್ತದೆ.)

## ನವಯುಗ

ಪ್ರತಿ ಗುರುವಾರ
ತಪ್ಪದೆ ಹೊರಡುವ
ಉತ್ಕೃಷ್ಟ ಕನ್ನಡ ವಾರಪತ್ರಿಕೆ.

ವಾ। ವರ್ಗಣಿ (ಅಂ. ಸೇರಿ) 3 4 0

ಮೆನೇಜರ್, **'ನವಯುಗ,'**
ಹಂಪನಕಟ್ಟೆ, ಮಂಗಳೂರು.

"ತೊದಲ್ನುಡಿ" ಗ್ರಂಥಮಾಲಾ

ನುಡಿ ೩

# ನಾಡ ಕಥೆಗಳು

ಭಾಗ ೧

ಪ್ರಕಾಶಕರು

**ಕಿರಿಯರ ಪ್ರಪಂಚ, ಉಡುಪಿ**

ಮುದ್ರಕರು

ತುಳುನಾಡ್ ಛಾಪಖಾನೆ, ಉಡುಪಿ

**1933**

[*All Rights Reserved*]

**KARNATAK BOOK-DEPOT.**
*Pr F G CHIMALGI,*
**GOWLIGU... ...LERABAD-DN.**

ಬೆಲೆ ೨ ಆಣೆ.

## ಕಥೆಗಳು ಮತ್ತು ಕಥೆಗಾರರು.

೧ ತಿರುಪತಿ ಮುಡುಪಿನ ಕಳವು—ಶ್ರೀ। ಕೆ. ಕೆ. ಶೆಟ್ಟಿ.
೨ ನಮ್ಮ ಶಾಸ್ತ್ರಗಳು —ಶ್ರೀ। ಎಸ್. ವೆಂಕಟರಾಜ.
೩ ಶೆಟ್ಟ್ರೆಮನೆಯ ಮದುವೆ —ಶ್ರೀ। ಎಸ್. ವಿಟ್ಠಲ ಹೆಗ್ಡೆ.
೪ ನಮ್ಮೂರ ಐಗಳು —ಶ್ರೀ। ತೋನ್ಸೆ ಜನಾರ್ದನಯ್ಯ.
೫ ಅಂದು—ಇಂದು —ಶ್ರೀ। ಹೊನ್ನಯ್ಯ ಶೆಟ್ಟಿ.

Checked 1965

## ನಮ್ಮ ಆಶ್ರಯದಾತರು

೧ ಶ್ರೀಯುತ ಅಂಬಾಡಿ ಬೀಡು ಗೋಪಾಲ ಶೆಟ್ಟಿ
೨ ,, ತೋನ್ಸೆ ಜನಾರ್ದನಯ್ಯ

## ನಮ್ಮ ಗ್ರಂಥಗಳು

| ಹಿಂದಿನವು | ಮುಂದಿನವು |
|---|---|
| ೧ ಸ್ವತಂತ್ರ ಜೀವನೋಪಾಯ | ೧ ಮುಂಬೆಳಗು |
| ೨ ಸಂಶಯ ಪಿಶಾಚಿ | ೨ ಕಿರಿಯ ಕಥೆಗಳು |

# ತಿರುಪತಿ ಮುಡುಪಿನ ಕಳವು

೧

ನಡುಗುಪ್ಪಿನ ಗುಡ್ಡ ಶೆಟ್ಟರೆಂದರೆ ಪಡು ಗ್ರಾಮದಲ್ಲೆಲ್ಲಾ ಭಾರಿ 'ಕಾರ್ಬಾರಿ'. ಈ 'ಭಾರಿ ಕಾರ್ಬಾರಿ' ಎಂಬ ಶೆಟ್ಟರ ಕರಿ ಕೀರ್ತಿಲತೆಯು ನಾಚಿಕೆ ಮುಳ್ಳಿನಂತೆ ನೋಡನೋಡುತ್ತ ಪ್ರಬಲವಾಗಿದ್ದಿತು. ಕಳೆಯೊಂದು ಕೀಳಲು ಶಕ್ತಿಯಿಲ್ಲದೆ, ಬೆಳೆಯೊಂದು ಬೆಳೆಸುವ ಅನ್ಯಾಯಕ್ಕಂಜಿ ಜನರೆಲ್ಲಾ ಮೂಗಿಗೆ ಬೆರಳಿಟ್ಟು, "ಮನುಷ್ಯನ ಅವಸ್ಥೆ ಹೀಗೇ ಎಂದು ಹ್ಯಾಗೆ ಹೇಳುವುದು! ಬೂದಿರಾಶಿಯಲ್ಲಿದ್ದ ಚಕ್ಕನಾಯಿ ಗಾದಿಯ ಮೇಲೇರಿದಂತೆ ಈ ಗುಡ್ಡ, ಎಲ್ಲಿದ್ದವ ಎಲ್ಲಿಗೆ ಬಂದ! ಈ ಕಲಿಕಾಲದಲ್ಲಿ ನ್ಯಾಯ ನೀತಿಗೆ ಬೆಲೆಯಿಲ್ಲಪ್ಪ! ಅನ್ಯಾಯ ಮಾಡಿದವನಿಗೇನೇ ಕಾಲ!" ಎಂದು ಒಳಗೊಳಗೆ ಗೊಣಗುತ್ತಿದ್ದರೇ ಹೊರತು ಗುಡ್ಡಶೆಟ್ಟರ ಅಬ್ಬರದ ಇದಿರಲ್ಲಿ ಎಲ್ಲರೂ ಸ್ತಂಭಿತರಾಗಿ ಕಣ್ಣಲ್ಲಿ ಮಾತ್ರ ಜೀವವುಳ್ಳವರಾಗುತ್ತಿದ್ದರು. ಒಂದೊಮ್ಮೆ ಬೂದಿಬುರುಕನಾಗಿ ಭಂಡ ಉಂಡಾಡಿಯೆನಿಸಿದ್ದ ಗುಡ್ಡ ಶೆಟ್ಟಿಯು ಗಂಡುಗಲಿಯೆನಿಸಿ ಪ್ರಚಂಡ ದರ್ಪ ಬೀಗಲು ಕಾರಣವೇನೆಂದು ಒಂದೇ ಶಬ್ದದಲ್ಲಿ ಹೇಳಿಬಿಡುವುದಾದರೆ, ಪುಂಡರೊಡೆಯನಾದದು. ಬ್ರಿಟಿಷ್ ಸರಕಾರದ ಆಡಳಿತ ಯಂತ್ರವು ಮೋಟರ್ ವಾಹನಗಳಂತೆ ಪೇಟೆಯಲ್ಲಿ ಎಷ್ಟೊಂದು ತೀವ್ರಗತಿಯಿಂದ ಚಲಿಸಿ ದೂಳಿನ ಧೂಮವೆಬ್ಬಿಸಿ ಜನರನ್ನು ಕುರುಡುಗೊಳಿಸಿದರೂ, ಪಡು ಗ್ರಾಮದಂತಹ ದೂರದ ಹಳ್ಳಿಗಳಲ್ಲಿ ಗಾಳಿ ಮುರಿದು ಬಿದ್ದು, ತಾನೇ ದೂಳಲ್ಲಿ ಹೊರಳಾಡುತ್ತಿದ್ದಿತು! ಉಂಡಾಡಿಯಾದ ಗುಡ್ಡನು ಗಂಡುಗಲಿ ಗುಡ್ಡಶೆಟ್ಟರೆನಿಸಿ ಪ್ರತಾಪ ಬೀರಲು ಇದೇ ಕಾರಣ. 'ಅಡ್ನಾಡಿ'ಯಾಗಿ ಮನೆಮನೆ ಅಡ್ನಾಡಿ, ವಿಭೂತಿ ಪೆಟ್ಟಿಗೆಯಲ್ಲಿದ್ದ ವೆಂಕಟ್ರಮಣ ಗಂಟನ್ನೋ, ಭೂತದ ಗುಡಿಯಲ್ಲಿದ್ದ ಕಂಚಿನ ಮೂರ್ತಿ, ಘಂಟಾಮಣಿಗಳನ್ನೋ ಕದ್ದೊಯ್ಯುವ

ಚಿಕ್ಕ ಚೋರನಾಗಿ, ತನ್ನ ಮುಂದಿನ ಪ್ರಭಾವದ ಪ್ರಬಲ ಕಟ್ಟಡಕ್ಕೆ ಕೆಸರು ಕಲ್ಲು ಹಾಕಿದಾಗ, "ಇಷ್ಟು ಧೈರ್ಯದ ಕಳ್ಳನಾರು? ಅವನಿಗೆ ಭೂತವೇ ತಕ್ಕ ಪ್ರತಿಫಲ ಕೊಡದಿರದೆ"ಂದು ಶಪಿಸಿ, ಜನರು ಸುಮ್ಮನಿದ್ದರೇ ಹೊರತು ಬೂದಿಬುರುಕ ಗುಡ್ಡನ ಮೇಲೆ ಒಂದಿಷ್ಟು ಸಂಶಯಪಡಲಿಲ್ಲ.

ಹೀಗಿರುತ್ತಾ ಒಂದು ದಿನ ಪಡು ಗ್ರಾಮದ ವಿಷ್ಣುಮೂರ್ತಿ ದೇವಾಲಯದ ಚಿನ್ನಾಭರಣ, ಬಂಗಾರದ ವಿಗ್ರಹ ಕೂಡ ಕದ್ದೊಯ್ಯಲ್ಪಟ್ಟಿರುವುದೆಂಬ ಹಾಹಾಕಾರವೆದ್ದಿತು. ಪೋಲೀಸರು ಬಂದರು. ೨, ೩ ದಿವಸ ಪತ್ತೆ ನಡೆಸಿದರು. ವಿಚಾರಿಸಿದರು, 'ರಿಕಾರ್ಡು' ಮಾಡಿದರು, ಕಂಕುಳಲ್ಲಿಟ್ಟರು; ಬಂದ ದಾರಿ ಹಿಡಿದರು.

ಜನರಿಗೆಲ್ಲಾ ದೇವಸ್ಥಾನದ ಹತ್ತಿರದಲ್ಲಿರುವ, ಮುಂಜಾನೆಯಿಂದ ಮೂಸಂಜೆಯ ವರೆಗೆ ಸಜೀವ ಸೈಕಲ್ಲಿನಂತೆ, ಓಡಾಡಿ ಮೀನು ಮಾರಿ ದಿನದ ಪಥ್ಯ ನಡಿಸುವ ಅಬ್ದುಲ್ ಖಾದ್ರಿ ಬ್ಯಾರಿಯ ಮೇಲೆ ಬಲವಾದ ಸಂದೇಹ! ಹಿಂದುವಾದ ಯಾರಿಗಾದರೂ ಹೀಗೆ ದೈವದ್ರೋಹ ಮಾಡಲು ಎದೆ ಸಾಲದೆಂದೂ, ಒಂದೊಮ್ಮೆಗೆ ಎದೆಗೊಂಡರೂ ರಕ್ತಕಾರಿ ಸತ್ತೇ ಹೋದಾನೆಂದೂ, ತಲೆಗೆಟ್ಟು ಬೀದಿಬೀದಿ ಅಲೆದಾಡಿಯಾನೆಂದೂ ಜನರ ದೃಢ ವಿಶ್ವಾಸ! ಅಂತೆಯೇ ವಿಷ್ಣುಮೂರ್ತಿಯೆದಿರಲ್ಲಿ ಅವರೆಲ್ಲರ ಶಾಪ. ಪೋಲೀಸರು ಬಡ ಅಬ್ದುಲ್ ಖಾದ್ರಿಯ ಮನೆ ಜಪ್ತಿಮಾಡಿ ನಾರುವ ಒಣ ಮೀನಿನ ಕಟ್ಟಷ್ಟನ್ನು ಹೊರಹಾಕಿದರು. ಖಾದ್ರಿಯನ್ನು "ಮೇಲೆ ಕೆಳಗೆ" ಮಾಡಿದರು. ಅವನು 'ಅಲ್ಲ'ನ ಸಾಕ್ಷಿಯಾಗಿ "ನಾನು ಕಳಲಿಲ್ಲ" ಎಂದು ಹತ್ತಿಪ್ಪತ್ತು ಸಲಾಮು ಕೊಟ್ಟ ಮೇಲೆ ಬಿಟ್ಟುಬಿಟ್ಟರು. ಮುಂಚಿನ ರಾತ್ರಿ ದೇವಸ್ಥಾನದೊಳಗೆ ಬಂದು, ಒಂದು ಮೂಲೆಯಲ್ಲಿ 'ಬೋದಾಳಶಂಕರ'ನಂತೆ ಬಿದ್ದುಕೊಂಡಿದ್ದ ಗುಡ್ಡನೇ ರಾತ್ರಿ ದೇವಸ್ಥಾನದ ಸಿಂಹದ್ವಾರ ತೆರೆದು, ತನ್ನ ಸಂಗಾತಿಗಳನ್ನು ಒಳಬಿಟ್ಟು, ಗರ್ಭಗುಡಿಯ ಬೀಗದ ಕಳ್ಳ ಕೈಯಿಂದ ಈ ದೊಡ್ಡ 'ಚೋರಿ' ನಡಿಸಿದುದೆಂಬ ಸಂಶಯ ಯಾರಿಗೂ ಉಂಟಾಗಲಾಸ್ಪದವಿರಲಿಲ್ಲ. ಕೆಲ ಸಮಯದ ನಂತರ ಪಡು ಗ್ರಾಮದ ಬೀಡಿನ ಬಲ್ಲಾಳರ ಮನೆಗೆ ಕಳ್ಳರು ನುಗ್ಗಿದಾಗಲೂ ಗುಡ್ಡನ ಸಂಗಾತಿಗಳು ಕೆಲವರು ಕೈದುಮಾಡಲ್ಪಟ್ಟು ಶಿಕ್ಷೆಗೆ ಗುರಿಯಾದರು. ಆದರೆ ಸುದೈವಿ ಗುಡ್ಡನಿಗೇನೂ ತೊಂದರೆಯಾಗಲಿಲ್ಲ.

ಗುಡ್ಡನಿಂದ ಗುಡ್ಡಶೆಟ್ಟರಾದ ಹೆಸರಿನ ಉತ್ಕ್ರಾಂತಿಯ ಹಿಂದಿನ ಚರಿತ್ರೆಯು ಅದೆಷ್ಟು ಕಳಂಕಿತವಾದರೂ, ಪೈಶಾಚಿಕವಾದರೂ, ಅದನ್ನೆಲ್ಲಾ ಇಂದಿನ ಪ್ರಕಾಶವು ಉಜ್ವಲಗೊಳಿಸಿಬಿಟ್ಟಿರುವುದು. ಯಾರದೋ ಗಂಟು ಸಿಕ್ಕಿತೆಂದು ಕೆಲವರೂ, ಕೊಪ್ಪರಿಗೆ ದೊರೆತಿರುವುದೆಂದು ಇನ್ನು ಕೆಲವರೂ ಗುಡ್ಡನ ಪ್ರಾಬಲ್ಯದ ಕುರಿತು ನಾನಾ ಕಥೆಗಳನ್ನು ಕಲ್ಪಿಸುತ್ತಿದ್ದರೇ ಹೊರತು ಕಳ್ಳತನವೇ ಅವನ ಪ್ರಾಬಲ್ಯಕ್ಕೆ ಮೂಲಕಾರಣವೆಂಬುದರ ರಹಸ್ಯವನ್ನು ಅರಿತುಕೊಂಡವರು ಬರೇ ಕೆಲವರು. ಅವರೇನಾದರೂ ಆ ಕುರಿತು ಉಸುರೆತ್ತಿದರೆ ಮತ್ಸರಿಗಳೆಂಬ ಗುಣನಾಮವು ಅವರಿಗೆ ಒಡನೆಯೇ ದೊರೆತು, ಗುಡ್ಡಶೆಟ್ಟರ ವಕ್ರದೃಷ್ಟಿಯು ಅವರ ಮೇಲೆ ಬಿದ್ದು, ಅವರ 'ಕಾರುಬಾರಿ'ನ ಕಾಡ್ಗಿಚ್ಚಿಗೆ ಸಿಕ್ಕಿ, ಬೇಯುವ ಗಂಡಾಂತರಗೊಳಗಾಗಬೇಕಿದ್ದಿತು. ತಾನು ಬೀಡಿನ ಬಲ್ಲಾಳ; ತನಗೆಲ್ಲರೂ ತಲೆ ಬಾಗಬೇಕೆಂಬ ಅಹಂಕಾರದಿಂದ ಶೆಟ್ಟರನ್ನು ತಿರಸ್ಕರಿಸಿದ ಪಡು ಗ್ರಾಮದ ಬಲ್ಲಾಳರ ಮನೆಯೇ 'ಗುಂಡಾಂತರ'ವಾದ ಉದಾಹರಣೆಯು ಜನರ ಕಣ್ಣೆದುರಲ್ಲಿ ಕುಣಿದಾಡುತ್ತಿದ್ದಿತು. ಶೆಟ್ಟರ ಇಕ್ಕಣ್ಣಿನ ಬೆಂಕಿಯಲ್ಲಿ ಹಾತೆಗಳಂತೆ ಉರಿಯುವುದಕ್ಕಿಂತ ಆಶ್ರಯಛಾಯೆಯ ಸೊಂಪಿನಲ್ಲಿ ಇರಲೆಳಸುವವರೇ ಹೆಚ್ಚಿ, ಅವರ ಮಾತಿಗೆ ಚಕಾರಶಬ್ದ ಎತ್ತುವವರು ಪಡು ಗ್ರಾಮದಲ್ಲೇ ಇಲ್ಲದಂತಾದುದರಲ್ಲಿ ವಿಚಿತ್ರವೇನು?

ಅನ್ಯಾಯಕ್ಕೆ ಒಂದಲ್ಲೊಂದು ದಿನ ಅಪಾಯ ತಪ್ಪದೆಂಬ ನಿಯಮದ ಹುರುಳನ್ನು ಶೆಟ್ಟರು ಗಾಳಿಗೊಡ್ಡಿಬಿಟ್ಟರು. ಅವರ ಮನೆಯು ನಡುಗುತ್ತೆನಿಸಿ ಪಡುಗ್ರಾಮದಲ್ಲ ಒಂದನೇ ಮನೆಯಾಯಿತು. ಯಾರ ತಲೆ ಬಡೆದಾಗಲಿ, ಯಾರ ಸೊತ್ತನ್ನು ಅಪಹರಿಸಿಯಾಗಲಿ, ಗುಡ್ಡಶೆಟ್ಟರ ಆಸ್ತಿ ಬದುಕು ದಿನೇ ದಿನೇ ಬೆಳೆಯಿತು. ವರ್ಷ ೫೦ರ ಗಡಿ ದಾಟಿದರೂ, ನಡು ಪ್ರಾಯದ ಮೈಕಟ್ಟುಳ್ಳ ಅವರಲ್ಲಿ ಯೌವನವು ಕಳೆಯೇರುವಂತಿದ್ದಿತು. ಅವರು ದೊಡ್ಡ ಮನೆತನದ ಜಕ್ಕ ಜವ್ವನೆ ಹುಡುಗಿಯೋರ್ವಳನ್ನು ಎರಡನೇ ವಿವಾಹವಾದರು. ಅವರ ಮೊದಲನೇ ಹೆಂಡತಿಯ ಮಗನಿಗೆ ಹೆಣ್ಣು ಕೊಡಲು ತಾನು ಮುಂದೆ ತಾನು ಮುಂದೆ ಎಂದು ಅತಿ ಘನವಂತರೆನಿಸುವ ಮನೆಯವರೆಲ್ಲಾ ಮೇಲಾಡತೊಡಗಿದರು. ವಂಶಪಾರಂಪರ್ಯವಾದ ಮನೆತನ, ಘನಸ್ತಿಕೆ, ಮರ್ಯಾದೆಯೆಂಬುದೆಲ್ಲಾ ಎಂತಹ ಭ್ರಾಂತಿಯೆಂಬುದನ್ನು ಶೆಟ್ಟರು ಬಯಲುಮಾಡಿ

ಬಿಟ್ಟರು. ಅವೆಲ್ಲಾ ಅವರು ಬೇಡವೆಂದರೂ ಅವರ ಕಾಲ ಬುಡದಲ್ಲಿ ಬಿದ್ದು ಹೊರಳಾಡುತ್ತಿದ್ದವು.

೨

ಶೆಟ್ಟರ ಐಶ್ವರ್ಯದ ಭರತಕ್ಕೆ ಇಳಿತವಿಲ್ಲದಾಯಿತು. ಪ್ರಾಯ ಹೋದಂತೆ ಆಸ್ತಿ ಬದುಕಿನ ಹಸಿವು ಆರಿ, ಮನಸ್ಸು ದೈವಭಕ್ತಿಯ ಕಡೆಗೆ ಹರಿಯಿತು. ತಾನು ಯಾವ ಮೂರ್ತಿಯನ್ನು ಸ್ವಹಸ್ತದಿಂದ ಕದ್ದೊಯ್ದಿದ್ದರೋ, ಅದೇ ವಿಷ್ಣುಮೂರ್ತಿ ದೇವಸ್ಥಾನವನ್ನು ಶೆಟ್ಟರು ಜೀರ್ಣೋದ್ಧಾರ ಮಾಡಿಸಿ, ರಾಶಿಪೂಜೆ ನಡಿಸಿ, ದೈವಭಕ್ತಿಪರಾಯಣರೆಂದು ಪ್ರಸಿದ್ಧರಾದರು. ಎಡೆಬಿಡದೆ ರಾಮಾಯಣ ಭಾರತ ಪಾರಾಯಣ, ಸತ್ಯನಾರಾಯಣ ಕಥಾದಿಗಳನ್ನು ನಡಿಸಿದರು. ಒಂದು ಕಾಲದಲ್ಲಿ ಮುಖ ಸಹ ತೊಳೆಯದೆ ತಂಗಳನ್ನ ನುಂಗುತ್ತಿದ್ದ ಶೆಟ್ಟರು ಈಗ ಬೆಳಿಗ್ಗೆ, "ನಾರಾಯಣ! ನಾರಾಯಣ!!" ಎಂದು ಎದ್ದು, ಮುಖ ತೊಳೆದು, ಮಿಂದು, ತುಳಸಿಪೂಜೆ ಮಾಡಿ, ಮೈ ತುಂಬ ವಿಭೂತಿ ಬಳೆದು, ಜಪಮಾಡಿ ಊಟಕ್ಕೆ ಹೋಗುವಾಗ, ಅಪರಾಹ್ನ ಗಂಟೆ ೨ ಆಗುತ್ತಿದ್ದಿತು. ಶೆಟ್ಟರ ೬೦ನೇ ಶಾಂತಿಯ ಸಂಭ್ರಮವನ್ನು ಇಲ್ಲಿ ವಿವರಿಸುತ್ತಾ ಹೋದರೆ ಶಿರೋನಾಮವೇನು, ಕೆಳಗೆ ಬರೆದುದೇನೆಂದು ವಾಚಕರು ಟೀಕಿಸಬಹುದಾದುದರಿಂದ ಅದನ್ನಿಲ್ಲಿ ನಿಲ್ಲಿಸಿ ಕಥೆಯ ತಿರುಳಿಗೆ ಗಮನ ಕೊಡಬೇಕಾಗಿದೆ.

ಇಷ್ಟೊಂದು ಧರ್ಮನಿಷ್ಠರಾದ ಶೆಟ್ಟರು ತಿರುಪತಿಯಾತ್ರೆ ಮಾಡಿ, ತನ್ನ ಪಾಪವನ್ನೆಲ್ಲಾ ತಿರುಪತಿಯ ಪಾಪನಾಶಿನೀ ತೀರ್ಥೋದಕದಲ್ಲಿ ಮೈ ಕೊಳೆಯಂತೆ ತೊಳೆದು ಬಿಡಬಹುದೆಂದು ಪಡು ಗ್ರಾಮದ ಸುಬ್ಬಾಭಟ್ಟರು ಅವರ ಕಿವಿಗೂದಿದರು. ಶೆಟ್ಟರ ಮನೆಯ ತಿರುಪತಿಯ ಮುಡುಪೂ ಅಧಿಕವಾಗಿ ಇದ್ದಿತು. ಶೆಟ್ಟರು ಸಕುಟುಂಬವಾಗಿ ತಿರುಪತಿಯಾತ್ರೆ ಮಾಡುವರೆಂದಾಯಿತು. ಕೂಡಲೇ ಊರ ಒಂದೊಂದು ಮನೆಯವರಿಗೇನೇ ವೆಂಕಟ್ರಮಣನ ನೆನಪಾಯಿತು. ಕೆಲವರಿಗೆ ಯಾವಾಗಲೋ ಮಾಡಿದ ಹರಕೆಯ ಸ್ಮರಣೆ ಬಂತು. ತುಕ್ಕು ಹಿಡಿದ ಕಾಲುಸರಿಗೆಯು ಕೆಲವರನ್ನು ಆಗಲೇ ಎಚ್ಚರಿಸಿತು. ಅಂತೂ ಶೆಟ್ಟರೊಡನೆ ತಿರುಪತಿ ಯಾತ್ರೆಗಾಗಿ ೧೦೦ಕ್ಕಿಂತಲೂ ಮಿಕ್ಕಿದ ಜನರ ದೊಡ್ಡ ಪರಸೆಯೆದ್ದಿತು. ಆಸುಪಾಸಿನಿಂದ ತಿರುಪತಿಗೆ

ಹೋಗುವವರ ಕುರಿಮಂದೆಯನ್ನೆಲ್ಲಾ ನಡೆಸುವ ಕುರುಬನಂತಿದ್ದು, ಕಾಸು ಖರ್ಚಿಲ್ಲದೆ ಹತ್ತುಪತ್ತು ಸಲ ತಿರುಪತಿಗೆ ಹೋಗಿಬಂದಿದ್ದ ಸುಬ್ಬಾಭಟ್ಟರು ಹಿರಿಹಿರಿ ಹಿಗ್ಗಿದರು. ಶೆಟ್ಟರ ಅನುಮತಿ ಪಡೆದು, ಪಾಂಡುಚೆರಿಗೆ ಹೋಗುವವನೆಂದು ತನ್ನ ಅಳಿಯನನ್ನೂ ತನ್ನೊಂದಿಗೆ ಕರದಿದ್ದರು. ಶೆಟ್ಟರು ತಿರುಪತಿ ಯಾತ್ರೆಗೆ ಹೊರಟಾಗ ಇಡೀ ಊರೇ ಎದ್ದಂತಾಯಿತು. ಪ್ರಮುಖರಾದ ಶೆಟ್ಟರ ಹೆಗ್ಗಳಿಕೆಗೆ ತುದಿ ಮೊದಲಿಲ್ಲದಾಯಿತು.

ಶೆಟ್ಟರ ಪರಸೆಯು ರೈಲ್ವೇ ಸ್ಟೇಶನಿನಲ್ಲಿ ಮಾಡಿದ ಗದ್ದಲ, ಟ್ರೈನ್ ಹತ್ತುವ ಗಲಾಟೆ, ಸ್ಟೇಶನುಗಳಲ್ಲಿ ಅವರಿಗೂ ಒಳಹೊಕ್ಕುವ ಇತರ ಪ್ರಯಾಣಿಕರಿಗೂ ನಡೆವ ಜಟಾಪಟಿಯನ್ನೆಲ್ಲಾ ವಿಸ್ತರಿಸುತ್ತಾ ಹೋದರೆ ಅದೇ ಒಂದು ಮನೋರಂಜಕ ಕಥೆಯಾಗಬಹುದು. ಈ ಗಲಾಟೆ ನಡೆಯುವಾಗ ಸುಬ್ಬಾಭಟ್ಟರು ಅದೊಂದು ಕುಟಿಲ ವಂಚನೆಯ ತಂತ್ರ ಹೂಡಿ ಬಕಧ್ಯಾನಪರರಾಗಿ ಇದ್ದರು. ಅದಕ್ಕಾಗಿ ತನ್ನ ಅಳಿಯನನ್ನು ಸಂಗಡ ಕರೆದೊಯ್ದಿದ್ದರು. ಪ್ರತಿದಿನ ಪಾನಕಪೂಜೆ ಮಾಡಿ ಪವಿತ್ರವಾಗಿ ಇರಿಸಬೇಕಾಗಿದ್ದ ತಿರುಪತಿಯ ಮುಡುಪನ್ನು ಪರಸೆಯವರೇ ಇಟ್ಟುಕೊಂಡಲ್ಲಿ ಅದು ಮೈಲಿಗೆಯಾಗಬಹುದಾದುದರಿಂದ, ಅದನ್ನೆಲ್ಲಾ ಒಟ್ಟುಮಾಡಿ ಒಂದು ದೊಡ್ಡ 'ಪಿಟಾರಿ'ಯೊಳಗೆ ಇಟ್ಟು, ತಾನೇ ಇಟ್ಟುಕೊಳ್ಳುತ್ತಿದ್ದರು. ಪ್ರತಿದಿನ ಪಿಟಾರಿಯ ಬಾಯಿ ತೆಗೆದು, ಪೂಜೆಮಾಡಿ, ಬೀಗ ಹಾಕುತ್ತಿದ್ದರು.

'ಟ್ರೈನು' ರಾತ್ರಿ ಕಾಟ್ಪಾಡಿ 'ಸ್ಟೇಶನಿ'ಗೆ ಮುಟ್ಟಿತು. ತಿರುಪತಿಗೆ ಹೋಗುವವರೆಲ್ಲರೂ ಅಲ್ಲಿ ಇಳಿದು, ಬೇರೆ 'ಟ್ರೈನು' ಹತ್ತಬೇಕು. ಪಾಂಡುಚೆರಿಗೆ ಹೋಗುವವರು ಮತ್ತೊಂದು 'ಟ್ರೈನು' ಹಿಡಿಯಬೇಕು. ಪರಸೆಯೆಲ್ಲಾ ಇಳಿಯಿತು. ಸುಬ್ಬಾಭಟ್ಟರೂ ಅವರ ಅಳಿಯನೂ ಮುಡುಪಿನ 'ಪಿಟಾರಿ'ಯನ್ನು ಹೊತ್ತು ಒಂದು ಮೂಲೆಗೊಯ್ದಿಟ್ಟರು. ಪರಸೆಯವರು ತಮ್ಮ ಮುಡುಪೆಲ್ಲಾ ಸುಬ್ಬಾಭಟ್ಟರ ಹಸ್ತ ಸುರಕ್ಷಿತವಾಗಿದೆಯೆಂದು ಅದರ ಗೊಡವೆಯನ್ನೇ ಬಿಟ್ಟು, 'ಟ್ರೈನಿ'ನಿಂದ ಇಳಿದು, ಇನ್ನೊಂದಕ್ಕೆ ಹತ್ತುವ ಗಲಾಟೆಯಲ್ಲಿ ಬಿದ್ದರು. ಸುಬ್ಬಾಭಟ್ಟರ ಅಳಿಯನು "ನಾನು ಪಾಂಡುಚೆರಿಗೆ ಹೋಗುತ್ತೇನೆ" ಎಂದು ಶೆಟ್ಟರನ್ನು ಬೀಳ್ಕೊಟ್ಟನು. ಅವನು ಪಾಂಡುಚೆರಿ 'ಟ್ರೈನ್' ಹತ್ತಿದನೋ, ಇಲ್ಲವೋ ಎಂದು ಪರೀಕ್ಷಿಸುವವರಾರು? ಅವನು ಮುಡುಪಿನ

ಪಿಟಾರಿಯ ಮೇಲೆ ತನ್ನ ಧೋತರವನ್ನು ಮುಚ್ಚಿ ಸುಮ್ಮಗೆ ಕಣ್ಣುಗೂರುತ್ತಾ ಕುಳಿತುಬಿಟ್ಟನು.

ಇತ್ತ ಸುಬ್ಬಾಭಟ್ಟರು ಯಾವಾಗಲೂ ಶೆಟ್ರೊಡನೆಯೇ ಇರುವವರು ಇವತ್ತು ಬೇರೆ ಎಲ್ಲಿಯೋ ಒಂದೆಡೆ ಟ್ರೈನು ಹತ್ತಿಬಿಟ್ಟರು. ಟ್ರೈನು ತಿರುಪತಿ ಸ್ಟೇಶನಿಗೆ ಮುಟ್ಟಿತು. ಪರಸೆಯುವರೆಲ್ಲಾ ಕೆಲವರು ಇಳಿದರು. ಇನ್ನು ಕೆಲವರು ಇಳಿಯುವ ಅವಸರದಲ್ಲಿದ್ದರು. ಆಗ ಹಠಾತ್ತಾಗಿ, "ಅಯ್ಯೋ! ನನ್ನ ಮುಡುಪಿನ ಪೆಟ್ಟಿಗೆ! ಎಲ್ಲಿ ಹೋಯಿತು! ಅಯ್ಯೋಯ್ಯೋ ದೇವರೇ! ಯಾರೋ ಕದ್ದೊಯ್ದರು! ಶೆಟ್ರೆ! ಇನ್ನೇನು ಗತಿ!" ಎಂದು ಮೊರೆಯಿಡುತ್ತಾ ಸುಬ್ಬಾಭಟ್ಟರು ಆಗತಾನೇ ಟ್ರೈನಿನಿಂದ ಇಳಿದು ಶೆಟ್ರ ಕಡೆಗೆ ಓಡಿದರು.

"ಏನು? ಏನಾಯಿತು? ಮುಡುಪಿನ ಪಿಟಾರಿಯೋ ಕಳವಾಯಿತೇ? ಅಯ್ಯೋಯ್ಯೋ!" ಎಂದು ತಳಮಳಗೊಂಡು ಎಲ್ಲರೂ ಸುಬ್ಬಾಭಟ್ಟರ 'ಕಂಪಾರ್ಟ್‌ಮೆಂಟನ' ಕಡೆಗೆ ಧಾವಿಸಿದರು. ಶೆಟ್ರೂ ಇನ್ನು ಕೆಲವರೂ, ಭೂತ ಹಿಡಿದ ಪಾತ್ರಿಯಂತೆ ತಲೆಬಿಚ್ಚಿ ಕಣ್ಣು ಕೆರಳಿಸಿ ನಖಶಿಖಾಂತ ಗಡಗುಟ್ಟ ನಡುಗುತ್ತಿದ್ದ ಸುಬ್ಬಾಭಟ್ರೊಂದಿಗೆ ಒಳಹೊಕ್ಕು ಹುಡುಕತೊಡಗಿದರು.

ಭಟ್ರು, "ಪಿಟಾರಿಯನ್ನು ಇಲ್ಲೇ ಇಟ್ಟು ಸ್ವಲ್ಪ ಕಣ್ಣಿನ ದಣಿವಾರಿಸಿದೆ. ಎದ್ದು ನೋಡುವಾಗ ಪಿಟಾರಿಯಿಲ್ಲ!" ಎಂದು ಒಂದು ಸ್ಥಳ ತೋರಿಸಿದರು. ಕೂಡಲೆ ಟ್ರೈನ್ ಹೊರಡುವ ಬಿಗಿಲಾಯಿತು. ಎಲ್ಲರೂ ದಡಬಡನೆ ಕೆಳಗಿಳಿದರು. ಮುಂದೆ ಮಾಡುವುದೇನೆಂದು ತೋಚದೆ ಎಲ್ಲರೂ ಭಯಚಕಿತರಾಗಿ ಮೂರ್ತಿಗಳಂತಾಗಿದ್ದರು. ವೆಂಕಟ್ರಮಣನು ಇನ್ನು ಎಂತಹ ಉಪದ್ರವ ಕೊಡುವನೋ ಎಂಬ ಭಯದಿಂದ ಎಲ್ಲರೂ ಕಂಪಿಸುತ್ತಿದ್ದರು.

ಆಗ ಸುಬ್ಬಾಭಟ್ರು ಧೈರ್ಯಗೊಂಡಂತೆ ನಟಸಿ ಶೆಟ್ರನ್ನು ಕರೆದು, "ಆಗಲಿ ಶೆಟ್ರೇ! ಯಾರೋ ದೈವದ್ರೋಹಿ ದುರಾತ್ಮನು ನಮ್ಮ ಮುಡುಪನ್ನೆಲ್ಲಾ ಕದ್ದೊಯ್ದನು. ಅವನಿಗೆ ಆ ವೆಂಕಟ್ರಮಣನೇ ತಕ್ಕ ಫಲವೀಯದಿರನು! ಅವನು ಹುಚ್ಚುತಾಗಿ ಊರೂರು ಅಲೆದಾಡದಿರನು! ನಾವೀಗ ಎಲ್ಲರೂ ಕೂಡಿ ಏನಾದರೂ ಸ್ವಲ್ಪ ಸ್ವಲ್ಪ ಹಣವನ್ನು ಕೂಡಿಸಿ ವೆಂಕಟ್ರಮಣನಿಗೆ ಅರ್ಪಿಸಿ, ಅವನ ಸನ್ನಿಧಿಯಲ್ಲಿ ನಮ್ಮ ಮುಡುಪಿನ ಕಳ್ಳನನ್ನು ಶಪಿಸಬೇಕು!" ಎಂದು ತೀವ್ರ ಆಕ್ರೋಶದಿಂದ ನುಡಿದರು.

ಎಲ್ಲರೂ ಅದಕ್ಕೆ ಸೈಗುಟ್ಟಿ ತಾವು ಉಳಿಸಬಹುದಾದ ಅಲ್ಪ ಸ್ವಲ್ಪ ಹಣವನ್ನು ಒಟ್ಟುಮಾಡಿ ಭಟ್ಟರ ಹಸ್ತ ಕೊಟ್ಟರು. ಹತ್ತಿಪ್ಪತ್ತು ಸಲ ಹೋಗಿ ತಿರುಪತಿ ವೆಂಕಟ್ರಮಣ ಗಂಟಿನ ಗುಟ್ಟನ್ನೆಲ್ಲಾ ಬಲ್ಲ ಭಟ್ಟರು, "ವೆಂಕಟ್ರಮಣನ ಕುಬೇರಸಾಲ ತೀರಿಸಿಕೊಳ್ಳಲು ಎಷ್ಟೋ ಹಣ ಬರುತ್ತದೆ. ಇದೀಗ ನನ್ನ ಸಾಲತೀರಿಸಲಿಕ್ಕಾಯಿತೆ"ಂದು ಒಳಗೊಳಗೆ ನಕ್ಕು ಸಂಗ್ರಹವಾದ ಸ್ವಲ್ಪ ಹಣಕ್ಕೆ ಪಾನಕಪೂಜೆ ಮಾಡಿದರು. ಗಿರಿ ಹತ್ತುವಾಗ ಕದ್ದು ಹೋದ ಮುಡುಪಿನ ಹಣ ಒಟ್ಟು ರೂ. ೨, ೩ ಸಾವಿರವಾಗಬಹುದೆಂದು ಕೆಲವರೂ, ೧, ೧॥ ಸಾವಿರವೆಂದು ಕೆಲವರೂ ಪಶ್ಚಾತ್ತಾಪಪೂರ್ವಕವಾಗಿ ವಾದಿಸುವಾಗ ಭಟ್ಟರು, "ಇಲ್ಲಪ್ಪಾ! ಹೆಚ್ಚಾದರೆ ೫೦೦ ರೂಪಾಯಿ ಆಗಬಹುದು. ಹೋಗಲಿ ನಮ್ಮ ಹೆಸರಲ್ಲಿ ಆ ಕಳ್ಳನು ಉದ್ಧಾರವಾಗಲಿ!" ಎಂದು ಒಮ್ಮೆ ವಿಕಾರನಗೆ ಬೀರಿಬಿಟ್ಟರು. ಶೆಟ್ಟರು ಕ್ರುದ್ಧರಾಗಿ ಭಟ್ಟರನ್ನೊಮ್ಮೆ ದಿಟ್ಟಿಸಿದರು. ನಂತರ ಭಟ್ಟರು ತಲೆಬಾಗಿ ಸುಮ್ಮನಿದ್ದರು.

* * *

ತಿರುಪತಿಯಾತ್ರೆ ಮುಗಿದು ಕೆಲವು ವರ್ಷಗಳು ಉರುಳಿದುವು. ಇಂದು ಸುಬ್ಬಾಭಟ್ಟರು ತನ್ನ ಹರಕು ಗುಡಿಸಲನ್ನು ಬಿಟ್ಟು, ಹೊಸ ಮಾಳಿಗೆ ಮನೆ ಕಟ್ಟಿಸಿ, ಅದರಲ್ಲಿ ಸುಖವಾಗಿರುವರು. ಹಟ್ಟಿಯಲ್ಲಿ ಜೋಡೆಮ್ಮೆ! ಏನೂ ಲೋಪವಿಲ್ಲದ ಸುಖಾನಂದ.

ಆದರೆ ಇವರ ಆಕಸ್ಮಿಕ ದೊಡ್ಡಸ್ತಿಕೆಯನ್ನು ನೋಡಿ, ಜನರಲ್ಲಿ ನಾನಾ ಊಹಾಪೋಹೆಗಳುಂಟಾದುವು. "ಅಂದು ವೆಂಕಟ್ರಮಣನ ಗಂಟನ್ನು ಇವರೇ ಜಾರಿಸಿ, ಅಳಿಯನ ವಶ ಕೊಟ್ಟರಬೇಕೆಂದೂ, ಅವನು ಪಾಂಡುಚೆರಿಗೆ ಹೋಗಬೇಕೆಂಬ ನೆವನದಿಂದ ಕಾಟ್ಪಾಡಿಯಲ್ಲಿ ಇಳಿದು ಮಂಗಳೂರಿಗೆ ಬಂದು, ಕೆಲ ದಿನ ಅಲ್ಲುಳಿದು, ಊರಿಗೆ ಬಂದಿರಬೇಕೆಂ"ದೂ ಜನರು ತರ್ಕಿಸಿದರು. ಅಳಿಯನ "ಕೋಮಲ ವಿಲಾಸ"ದ ನೀರಿನ ಹಣವು ಹೀಗೆ ಒಂದೇ ಸವನೆ ಏರಿರಲಾರದೆಂದು ಅವರು ತಿಳಿದರು. ಮುಡುಪಿಗೆ ಸಂಚಕಾರ ಕೊಟ್ಟು ತಮಗೆಲ್ಲ ನಾಮ ಎಳೆದ ಭಟ್ಟರ ಮೇಲೆ ಜನರೆಲ್ಲ ಕಣ್ಣಿಡಹತ್ತಿದರು.

ಗುಂಡ್ಡ ಶೆಟ್ಟರಿಗೂ ಈ ಸುದ್ದಿ ಮುಟ್ಟಿತು. ಅವರು ಭಟ್ಟರ ಮೇಲೆ ಮೊದಲೇ ಉರಿ ಕಾರುತಿದ್ದರು. ಒಮ್ಮೆ ಶೆಟ್ಟರು ತನಗೆ

೫೦೦ ರೂಪಾಯಿ ಬೇಕೆಂದಾಗ ಭಟ್ಟರು ಅದನ್ನು ನಿರಾಕರಿಸಿದುದೇ ಇದಕ್ಕೆ ಕಾರಣ. ಆಗಲೇ ಅವರಂದಿದ್ದರು—"ನಿನ್ನ ಘನಸ್ತಿಕೆಯನ್ನೊಮ್ಮೆ ನೋಡುವೆ"ನೆಂದು!

"ಏನು ಆ ಸುಬ್ಬಾಭಟ್ಟನೇ ಮುಡುಪು ಕದ್ದವನೊ? ಅವನ ಸೊಕ್ಕಿನ ಕಾರಣ ತಿಳಿಯಿತು. ಅವನ ಧಿಮಾಕೆ! ಇಂದೇ ಅವನಿಗೆ ಪಾಠಕಲಿಸುವೆನ."

"ಅಗತ್ಯವಾಗಿ! ಅವನಿಗೆ ತಕ್ಕ ಪ್ರಾಯಶ್ಚಿತ್ತವು ಇಂದೇ ಆಗಬೇಕು."

ರಾತ್ರಿ! ನಿಶ್ಶಬ್ದ!! ಆದರೆ ಆ ನೀರವತೆಯನ್ನು "ಹಾ! ಸತ್ತೆನು. ನಾನೇ ಮುಡುಪು ಕ...ದ್ದ...ವ...ನು. ಸ...ತ್ತೆ" ಎಂಬ ರೋದನಧ್ವನಿಯು ಒಮ್ಮಿಂದೊಮ್ಮೆಯೇ ಭೇದಿಸಿಬಿಟ್ಟಿತು. ಸುಬ್ಬಾಭಟ್ಟರಿಗೆ ಪೆಟ್ಟು ಮರ್ಮಸ್ಥಾನಕ್ಕೆ ಬಿದ್ದುದರಿಂದ, ಅವರು ಚೀರುತ್ತಾ ಇಹಲೋಕಯಾತ್ರೆಯನ್ನು ಕೊನೆಗಾಣಿಸಿದರು.

ಈ ಕೊಲೆಯ ವಾರ್ತೆಯು ಮಿಂಚಿನಂತೆ ಸುತ್ತಲೂ ಹರಡಿತು. ಆಗ ಶೆಟ್ಟರ 'ಕಾರ್ಬಾರೂ' ಕಡಿಮೆಯಾಗುತ್ತ ಬಂದಿತ್ತು. ಮೊದಲೇ ಹೊಂಚು ಹಾಕಿಕೊಂಡಿದ್ದ ಅಧಿಕಾರಿಗಳು, ಶೆಟ್ಟರ ಮೇಲೆ ಉರಿ ಕಾರುತ್ತಿದ್ದ ಜನರ ಬೆಂಬಲ ಪಡೆದು, ಅವರನ್ನು ಹೇಗೂ ಹಿಡಿದರು. ವಿಚಾರಣೆ ನಡೆಯಿತು. "ಶೆಟ್ಟರು ಅಪರಾಧಿ"ಯೆಂದು ನ್ಯಾಯಸ್ಥಾನದ ತೀರ್ಮಾನವಾಯಿತು.

ಅಪರಾಧಿಯಾಗಿ ಕೈದಿಯಾದ ಗುಡ್ಡನನ್ನು ಸರಕಾರವು ಪಾಶಿಶಿಕ್ಷೆಗೆ ಒಳಪಡಿಸಿತು.

# ನಮ್ಮ ಶಾಸ್ತ್ರಗಳು

೧

ಒಮ್ಮಿಂದೊಮ್ಮೆಗೆ ರಾಮಕೃಷ್ಣನ ಮನೆಯಲ್ಲಿ ಒಂದು ಹೊಸರೀತಿಯ ಗೊಂದಲವೆದ್ದಿತು. ಪಾಂಡುರಂಗಾಚಾರ್ಯರು, ಮಗನಿಗೆ ಸಂಬಂಧಿಕರೊಬ್ಬರ ಮಗಳನ್ನು ತಂದು ಮದುವೆ ಮಾಡಬೇಕೆಂಬ ಹಟವನ್ನು ಎಷ್ಟು ಮಾತ್ರಕ್ಕೂ ಬಿಡಲಾರರು. ರಾಮಕೃಷ್ಣನು ''ಏನೇ ಆಗಲಿ. ಆ ಹುಡುಗಿಯನ್ನು ಖಂಡಿತವಾಗಿಯೂ ಮದುವೆಯಾಗೆ''ನೆಂದು ಗಟ್ಟಿ ಮನಸ್ಸು ಮಾಡಿರುವನು. ಹೀಗಾಗಿ ದೊಡ್ಡ ಗೊಂದಲವೆದ್ದು, ಆಚಾರ್ಯರು ತಮ್ಮ ಅಧಿಕಾರಬಲದಿಂದ 'ಹಾಗಾದರೆ ನೀನು ನನ್ನ ಮನೆಯಲ್ಲೇ ಇರಲಾಗದು: ಹೊರಟುಹೋಗು' ಎಂದು ಗರ್ಜಿಸಿದರು. ಅದಕ್ಕೆ ಮಗನು ಬೆದರುವನೆ? ಅವನೇನು ಆಗ ತಾನೆ ಬಿ. ಎ. ಪ್ಯಾಸುಮಾಡಿಲ್ಲವೆ? ಅಂದ ಬಳಿಕ ಮತ್ತೇಕೆ ನಿಂತಾನು? 'ಹುಂ' ಎಂದು ಹೊರಟೇಬಿಟ್ಟ. ಮಂಗಳೂರಲ್ಲೇ ಒಂದು ಉದ್ಯೋಗವನ್ನು ಸಂಪಾದಿಸಿ, ತಾನೊಲಿದ ಬಡವರ ಹುಡುಗಿಯನ್ನೇ ಮದುವೆಯಾಗಿ ಇರತೊಡಗಿದ.

ಆ ಚಿಕ್ಕ ಸಂಸಾರವು ಸುಖದ ಮಾರ್ಗದಲ್ಲಿ ಇನ್ನೂ ಕಾಲಿಟ್ಟಿಲ್ಲ. ಅಷ್ಟರಲ್ಲಿ ದುಃಖದ ಛಾಯೆಯು ಕವಿಯಿತು. ರಾಮಕೃಷ್ಣನು ಅಕಸ್ಮಾತ್ತಾಗಿ ಕಾಯಿಲೆ ಬಿದ್ದನು. ಆ ಕಾಯಿಲೆಯೋ ಪ್ರಬಲವಾಗುತ್ತ ಬಂದಿತು. ಅಂತೆಯೇ ಜೀವಿತವೂ ಸಂದೇಹದ ಸ್ಥಿತಿಯಲ್ಲಿ ಬಂದು ನಿಂತಿತು. ಈ ವರ್ತಮಾನವನ್ನು ಕೇಳಿ, ತಂದೆ ತಾಯಿ ಮೊದಲಾದ ಸಂಬಂಧಿಕರೆಲ್ಲ ಬಂದು ಕೂಡಿದರು. ಅವರೊಂದಿಗೆ ಯಮನೂ ಬಂದು ತನ್ನ ಕೆಲಸವನ್ನು ಕೊನೆಗಾಣಿಸಿದನು.

೨

ಸರಸಿಯ ಜೀವನದ ನಡು ಹಗಲಿನಲ್ಲೇ ಕಗ್ಗತ್ತಲೆಯು ತಲೆದೋರಿತು. ಸಮಾಜದ ಮುಸುಕಿನ ಮರೆಯಲ್ಲಿ ನೊಂದು ಬೇಯುವ ಸಾವಿರಾರು ಬಡ

ಜೀವಿಗಳಲ್ಲಿ ಅವಳೂ ಒಬ್ಬಳು. ಆದರೆ ಅದನ್ನು ಕೇಳುವವರಾರು? ಎತ್ತ ನೋಡಿದರೂ ಅವಳ ಕಡೆಗೆ ತಾತ್ಸಾರದ ನೋಟ! ಮಾತುಮಾತಿಗೆ 'ಕಲಿ! ಯಾವ ಗಳಿಗೆಯಲ್ಲಿ ಆ ಹುಡುಗನ ಕೈ ಹಿಡಿದಳೋ' ಎಂದು ಎಲ್ಲರೂ ಗುಣು ಗುಟ್ಟುವರು! ಆದರೆ ಮಾಡುವುದೇನು? ಬಡವರ ಹೆಣ್ಣು. ಎಲ್ಲವನ್ನೂ ಕೇಳಿಯೇ ತೀರತಕ್ಕುದು. ಸಾಲದುದಕ್ಕೆ ಮಾವನ ಮನೆ ಸೇರಿದ ಮರು ವರುಷದಲ್ಲೇ ಅತ್ತೆಯೂ ದೈವಾಧೀನಳಾದಳು. ಅದೂ ಸೊಸೆಯ ತಪ್ಪೆಂದೇ ನಿರ್ಣಯಿಸಲ್ಪಟ್ಟು, ಆ ಸಲುವಾಗಿ ಯಥೋಚಿತ ಉಡುಗರೆಯೂ ಸಲ್ಲದಿರಲಿಲ್ಲ.

ಗೃಹಿಣಿಯು ಸತ್ತು ಕೆಲವು ತಿಂಗಳುಗಳು ಕಳೆದಂತೆ ಆಚಾರ್ಯರು ವಿಧುರತನದ ಘೋರ ಜೀವನವನ್ನು ನೆನೆನೆನೆದು ಒಂದೇ ಸವನೆ ಅಳತೊಡಗಿ ದರು. 'ನಾಲ್ಕು ಮಕ್ಕಳಾದರೇನು? ಇನ್ನು ಮದುವೆಯಾಗಬಾರದೆ? ಗಂಡು ಸಂಗೆ ಆ ಅಧಿಕಾರವಿಲ್ಲವೆ? "ನಮ್ಮ ಶಾಸ್ತ್ರಗಳು" ಹಾಗೆಯೇ ಹೇಳಿಲ್ಲವೆ? ಮತ್ತೇನು?' ಎಂದು ಆಚಾರ್ಯರು ತರ್ಕಿಸತೊಡಗಿದರು. ಅದಕ್ಕೆ 'ಅಲ್ಲ ಎನ್ನುವವರಾರು? ಅಡ್ಡಿಯಿಲ್ಲದೆ ಆಗಬಹುದು. ಇಲ್ಲವಾದರೆ ನೋಡಿ! ನಿಮಗೆ ಇನ್ನು ಮುಂದೆ ಬಹಳ ತೊಂದರೆಯಾದೀತು' ಎಂದು ಕೃಷ್ಣಶಾಸ್ತ್ರಿಗಳು ತಮ್ಮ ಮಗಳಿಗೆ ಪ್ರಯಾಸವಿಲ್ಲದೆ ವರ ದೊರೆಯುಬಹುದೆಂಬ ಆಶೆಯಿಂದ ಬಹಳವಾಗಿ ಸಾಧಿಸಿದರು. ಕೊನೆಗೆ ಹಾಗೆಯೇ ನಿರ್ಣಯವಾಯಿತು ಹುಡುಗಿಗೆ ವರ್ಷ ಹದಿನೈದು. ಬಹಳ ಅನುಕೂಲ. ಸ್ವಲ್ಪ ಕಪ್ಪು. ಹುಡುಗಿ ಚೆಂದವಿಲ್ಲ ವಂತೆ. ಅಷ್ಟೆ ತಾನೆ? ಅದರಿಂದೇನು? ಕುಡಿಮೀಸೆಯ ಜವ್ವನಿಗರು ಕಣ್ಣಿಡಲಾರರು. ಅತ ಏವ ಸರ್ವತೋಮುಖದಿಂದ ಶಾಸ್ತ್ರಿಗಳ ಮಗಳೇ ಯೋಗ್ಯ ವಧುವೆಂದು ಸಿದ್ಧಾಂತವಾಯಿತು. ಮದುವೆಗೆ ದಿನವಿಟ್ಟೂ ಆಯಿತು.

ಮದುವೆಯ ದಿನ ಆಚಾರ್ಯರು ಬೇಗನೆ ಎದ್ದು ನೂತನೋತ್ಸಾಹದಿಂದ ಮಹಡಿಯಿಂದ ಕೆಳಗಿಳಿದು ಬಂದರು. ಬಂದವರೇ ಕೆಳಗಡೆ ಗುಡಿಸುತಿದ್ದ ಸರಸಿಯನ್ನು ನೋಡಿ, 'ಛೀ! ಕಲಿ—! ಬೆಳಗಾಗುವ ಮುಂಚೆ ಸುಟ್ಟ ಮೋರೆ ಯನ್ನು ತೋರಿಸಿಯಾಯಿತು. ನಡೆಯಾಚೆ. ಇನ್ನೆಲ್ಲಿಯಾದರೂ ಇದಿರು ಬಂದರೆ—ಹುಂ!' ಎಂದು ಗರ್ಜಿಸಿ, ಆ ದೋಷನಿವೃತ್ತಿಗಾಗಿ ಹರಿಸ್ಮರಣೆ ಮಾಡುತ್ತ ಮುನ್ನಡೆದರು

ದಿಬ್ಬಣ ಹೊರಡಲು ಇನ್ನು ಹೆಚ್ಚು ಹೊತ್ತಿಲ್ಲ. ಆಚಾರ್ಯರು ಕಿರಿಯ ಮಗನನ್ನು ಕರೆದು, 'ಶ್ಯಾಮೂ! ನಿನ್ನೆ ಕೊಟ್ಟ ಆ ರೊಕ್ಕದ ಚೀಲ ಈಚೆ ತಾ' ಎಂದರು.

ಶ್ಯಾಮು ಒಳಗೆ ಓಡಿದನು. ಆದರೆ ಬೇಗ ಬರಲಿಲ್ಲ.

'ಬೇಗ ತಾರಾ' ಎಂದು ಆಚಾರ್ಯರು ಕೂಗಿದರು.

'ಕವಾಟನ ಬೀಗದಕ್ಕೆ ಸಿಕ್ಕುವುದಿಲ್ಲ'.

'ಎಲ್ಲಿಗೆ ಹೋಯಿತು'?

'ಯಾರಿಗೆ ಗೊತ್ತು? ಮೇಜಿನ ಮೇಲಿಟ್ಟಿದ್ದೆ. ಅತ್ತಿಗೆಗೆ ಗುಡಿಸುವಾಗ ಸಿಕ್ಕಿತ್ತೊ ಕೇಳುತ್ತೇನೆ' ಎಂದು ಶ್ಯಾಮುವು ಅತ್ತಿಗೆಯನ್ನು ಹಲವು ತಡವೆ ಕರೆದನು. ಆದರೆ ಉತ್ತರ ಬರಲಿಲ್ಲ.

'ಸಾಯಲಿ ಅವಳು. ಅಲ್ಲೇ ಎಲ್ಲಾದರೂ ಬಿದ್ದಿದೆಯೋ ನೋಡೋ!' ಎಂದು ಸಿಟ್ಟಿನಿಂದ ಆಚಾರ್ಯರೇ ಹೊರಟರು.

ಶ್ಯಾಮುವು ಬೇಗಬೇಗನೆ ಹುಡುಕಿದನು. ಕೀಲಿಯು ಸಿಗಲಿಲ್ಲ. ಆದರೆ ಒಂದು ಕಾಗದವು ಸಿಕ್ಕಿತು.

ಆಚಾರ್ಯರು ಒಳಗೆ ಬಂದು 'ಏನು ಸಿಕ್ಕಲಿಲ್ಲವೆ? ಏನದು?' ಎಂದು ಕಾಗದವನ್ನು ತೆಗೆದುಕೊಂಡರು. ಕಾಗದವೇನೋ ಚಿಕ್ಕದು.

> 'ಶ್ಯಾಮೂ —
>
> ನಾನೀಗ ಹೋಗುತ್ತೇನೆ. ಚಿಂತಿಸಬೇಡ. ನಿಜವಾಗಿಯೂ ದರೆ ಅಂದು ಹೋಗದಿದ್ದುದೇ ನನ್ನ ತಪ್ಪು. ಆದರೆ ಸಮಾಜದ ನರಕಯಾತನೆಗಳನ್ನು ಅನುಭವಿಸುವುದು ನನ್ನ ಹಣೆಯಲ್ಲಿ ಬರೆದಿದ್ದಿತೋ ಏನೋ. 'ನಮ್ಮ ಶಾಸ್ತ್ರಗಳಿ'ಗೆ ತಿಳಿಯಲಾರದ ಯಾತನೆಗಳವು. ಇನ್ನೂ ಈ ಸುಟ್ಟ ಮೋರೆಯನ್ನು ಇತರರಿಗೆ ತೋರಿಸಲಾರೆನು. ನಾನು ಹೋಗುವೆನು. ನೀನು ಒಳ್ಳೆಯವನಾಗಿ ಸುಖದಿಂದ ಬಾಳಪ್ಪ.
>
> ನಿನ್ನ — ಅತ್ತಿಗೆ.'

ಮದುವೆಯು ಗದ್ದಲವಡಗಿತು. ಎಲ್ಲರೂ 'ಸರಸೀ—ಸರಸೀ' ಎಂದು ಹುಡುಕತೊಡಗಿದರು. ಹಲವರು ಬಾವಿಗಿಳಿದರು. ಶ್ಯಾಮುವು ತೋಟದ ಕೊಳದ ಕಡೆಗೋಡಿದನು. ನೀರಿನ ಮೇಲೆ ಘನ ಪದಾರ್ಥವೊಂದು ತೇಲುತಿದ್ದಿತು. ಅದನ್ನು ಕಂಡು ಬೆಚ್ಚಿಬಿದ್ದು 'ಅಯ್ಯೋ! ಅತ್ತಿಗೆ!' ಎಂದು ಬೊಬ್ಬಿಟ್ಟನು. ಜನರೆಲ್ಲರೂ ಆ ಕಡೆಗೋಡಿಬಂದರು. ಆದರೇನು ಫಲ? ಕಾರ್ಯವು ಮಿಂಚಿರುವುದು. ಇನ್ನವಳು ಎಂದೆಂದಿಗೂ ಯಾರ ಇದಿರೂ ಬರಲಾರಳು— ತನ್ನ ಸುಟ್ಟ ಮೋರೆಯನ್ನು ತೋರಿಸಲಾರಳು!

# ಶೆಟ್ರ ಮನೆಯ ಮದುವೆ

೧

ಇಂದು ಹಲಸಿನ ಕೆರೆಯ ಸೆಟ್ರ ಮನೆಯಲ್ಲಿ ವಿವಾಹ ಸಮಾರಂಭದ ಭಾರಿ ಗೌಜಿ! ಅವರ ಪ್ರಸಿದ್ಧಿಯು ಆ ಊರಿನಲ್ಲೆಲ್ಲಾ ಜನಜನಿತವಾಗಿ ಅವರ ಕೀರ್ತಿ ಪ್ರವಾಹದಲ್ಲಿ ನಿಜವಾದ ಹೆಸರು ಮುಳುಗಿ ಹೋಗಿ, 'ಸೆಟ್ರು' ಎಂದು ಆದರ ತಲೆ ಮಾತ್ರ ತೇಲಾಡುತ್ತಿದ್ದುದರಿಂದ ಊರಿನವರ ಮಾದರಿಯನ್ನನುಸರಿಸಿ ನಾವೂ ಅವರನ್ನು ಹಾಗೆಯೇ ಸಂಬೋಧಿಸೋಣ!

ಸೆಟ್ರ ಮನೆಯ ಮದುವೆ. ಅದರಲ್ಲೂ ಅವರ ಮನೆಯಲ್ಲಿ ಸುಮಾರು ಅರ್ಧ ಶತಮಾನದಿಂದೀಚೆಗಿನ ವಿವಾಹವೆಂದರೆ ಇದೊಂದೇ! ಆದ್ದರಿಂದ ಇಂದಿನ ಸಂಭ್ರಮ ಆಡಂಬರಗಳನ್ನು ವರ್ಣಿಸುವ ಆಗತ್ಯವೇ ಇಲ್ಲ. ಆ ಊರಲ್ಲಿ ಎತ್ತ ಹೋದರೂ ಸೆಟ್ರ ಆಸ್ತಿ ಒಕ್ಕಲುಗಳ ಬೆಂಕೆಯಿಲ್ಲದ ಸ್ಥಳವೇ ಇಲ್ಲವೆನ್ನಬಹುದು. ಇನ್ನು ಆಪ್ತೇಷ್ಟರುಗಳಂತೂ ಈ ವರೆಗೆ ಸೆಟ್ರಿಂದ ಪಡೆದ ಸಹಾಯ ಸಂಪತ್ತಿಗೆಲ್ಲಾ ಬಡ್ಡಿ ಕೂಡಿಸಿ ಹಿಂದೆ ಸಲಾಯಿಸಲು ಇದೊಂದೇ ಸಂದರ್ಭವೆಂದು ವಿವಾಹದ ದಿನವನ್ನು ಮೊದಲೇ ಕಾದಿದ್ದರು. ಹಲವು ವರ್ಷಗಳಿಂದ ಅನೇಕ ಕಡೆಗಳಲ್ಲಿ ಮದುವೆಯ ಮುಯ್ಯಿಯ ರೂಪದಿಂದ ಚದರಿದ್ದ ಹಣವು ಇಂದು ಒಟ್ಟಾಗಿ ಸೆಟ್ರ ಕಿಸೆಯನ್ನು ಸೇರಲು ಕಾಯುತ್ತಿದೆ. ಒಂದೆಡೆಯಲ್ಲಿ ನೀರಿನಂತೆ ವ್ಯಯವಾಗುತ್ತಿರುವ ಸಂಪತ್ತಿನ ಇಳಿತ! ಇನ್ನೊಂದೆಡೆಯಲ್ಲಿ ಆಪ್ತೇಷ್ಟರುಗಳಿಂದ ತುಂಬಿ ಬರುವ ಧನದ ಭರತ!! ಬೇರೊಂದೆಡೆಯಲ್ಲಿ ಕೂಡಿಬಂದ ಜನಸಮುದಾಯದ ಕೋಲಾಹಲ! ಇವುಗಳಿಂದ ಸೆಟ್ರ ಮನೆಯು ಇಂದು ಮಹಾಸಾಗರದಂತೆ ಕಂಗೊಳಿಸುತ್ತಿದ್ದಿತು. ಎಲ್ಲೆಡೆಯಲ್ಲು ಸುಳಿದು, ಘರ್ಜಿಸಿ ಸಮುದಾಯಿಸಿ, ಸಕಲ ಪಾತ್ರಗಳಿಗೂ ಒಬ್ಬನೇ ನಟನಾಗಿ ಅಭಿನಯಿಸುತ್ತಿದ್ದ ಸೆಟ್ರ ಇಂದಿನ ಅವಸ್ಥೆಯನ್ನು ನೋಡುವಾಗ, ರಾವಣನ ಕೈ ಬಾಯಿಗಳಿದ್ದರೂ ಅವರಿಗೀಗ ಹೆಚ್ಚಾಗುತ್ತಿದ್ದಿಲ್ಲವೆಂಬಂತೆ ತೋರುತ್ತಿತ್ತು.

ಸೆಟ್ರ ಮನೆಯಲ್ಲಿ ಒಂಭತ್ತು ಧಾರೆಯ ಮದುವೆಯೆಂದು ಸುಮಾರು ಆರು ತಿಂಗಳುಗಳಿಂದಲೂ ಎಲ್ಲೆಲ್ಲಿಯೂ ಸುದ್ದಿ. ವಕ್ಕಲುಗಳಿಂದ ಜಿದಿರು, ಕಂಗು, ಸೋಗೆ ಮುಂತಾದವುಗಳ ಆಮದು ಅಂದಿನಿಂದಲೇ ಸುರು. ಧನಿಯ ಮನೆಯ ಮದುವೆಗೆಂದು ಅವರ ಹಿತ್ತಿಲುಗಳ ಕಾಯಿಪಲ್ಯಗಳು ಕಾದಿಡಲ್ಪಟ್ಟದ್ದು ಸುಮುಹೂರ್ತವನ್ನು ಕಾಯುತ್ತಿವೆ. ಈ ವರೆಗೆ ತಿಂಗಳಿಗೆರಡು ದಿನದಂತಿದ್ದ ಬಿಟ್ಟಿಯು ಈಗ ದಿನಂಪ್ರತಿ ಸುರುವಾಗಿ ವಕ್ಕಲುಗಳ ಮನೆಯ ಕೆಲಸಗಳು ಬಾಕಿಯಿವೆ.

ಇತ್ತ ಒಂಭತ್ತು ಧಾರೆಯ ಗುರಿಯನ್ನು ಮುಟ್ಟುವ ಮಹದಿಚ್ಛೆಯಿಂದ ಸೆಟ್ರ ಆಪ್ತೇಷ್ಟರು ವರಾನ್ವೇಷಣದ ದಿಗ್ವಿಜಯಕ್ಕಾಗಿ ನಾಲ್ಕೂ ಕಡೆ ಹೊರಟದ್ದಾರೆ. ತ್ರೇತಾಯುಗದಲ್ಲಿ ವಾನರಸೇನೆಯು ಇದೇ ರೀತಿ ಸೀತಾನ್ವೇಷಣಕ್ಕೆ ಹೊರಟಿರಬಹುದು. ದ್ವಾಪರದಲ್ಲಿ ರಾಜಸೂಯಾಧ್ವರದ ಧರ್ಮರಾಯನ ಪರಿವಾರವು ಇದರಂತೆಯೇ ಸಂಚರಿಸಿರಬಹುದು. ಆದರೆ ಕಲಿಯುಗದಲ್ಲಿಯೂ ಅವುಗಳ ಸರಿಹೋಲನೆಗೆ ನಿಲ್ಲುವ ದಿಗ್ವಿಜಯವೆಂದರೆ ಸೆಟ್ರ ಪರಿವಾರದ್ದೇ ಸರಿ. ಅಂತೂ ಅಕ್ಕಿಯ ಬೆಲೆಯಿಳಿಯುವ ಸಮಯದಲ್ಲಿ ಪರ ಬಂದರುಗಳ ದಲಾಲರು ನುಗ್ಗಿ ಒಮ್ಮೆಯೇ ದರ ಏರಿಸುವಂತೆ ಅಲ್ಲಲ್ಲಿಯ ಯುವಕರ ವರದಕ್ಷಿಣೆಯ ದರವನ್ನು ಕೊಂಚನುಟ್ಟಿಗೆ ಈ ಪರಿವಾರವು ಏರಿಸಿಬಿಟ್ಟತೆಂಬುದು ನಿಜ. ವರನ ಸಂಬಂಧಿಕರನ್ನೋ, ಸಂಬಂಧಿಕರ ಸಂಬಂಧಿಕರನ್ನೋ ಹಿಡಿದು ಮಾತಾಡಿಸಿ ಸಮೀಪಬಂತು ಎಂಬಷ್ಟರಲ್ಲೇ ಅಡ್ಡಬಂದ ವರದಕ್ಷಿಣಾ ಪ್ರವಾಹದ ಆಳವನ್ನು ಕಂಡು ಬೆದರಿ, ಹಲವೆಡೆಗಳಲ್ಲಿ ಹಿಂಜರಿದರು. ಇನ್ನು ಕೆಲವೆಡೆಗಳಲ್ಲಿ ವರನ ಕುಲ, ಗೋತ್ರ, ಆಸ್ತಿಪಾಸ್ತಿಗಳನ್ನು ಕಂಡು ಹಿಂಜರಿಯಬೇಕಾಯಿತು. ಕುಲ, ಬಲಿ, ವರನ ಯೋಗ್ಯತೆ, ಮುಖ್ಯವಾಗಿ ವರದಕ್ಷಿಣೆ ಇವುಗಳಲ್ಲೆಲ್ಲಾ ಕೂಡಿಬಂದ ಕೆಲವು ಯುವಕರನ್ನು ಆರಿಸಿ ನಿಶ್ಚಯಸೂತ್ರದಿಂದ ಬಿಗಿಯುವುದನ್ನು ಮಾತ್ರ ಬಾಕಿಯಿಟ್ಟು ಸೆಟ್ರ ಪರಿವಾರವು ಹಿಂತಿರುಗಿತು.

ಆದರೆ ಅನಿಶ್ಚಿತ ವರರಿಗೆ ಇತರ ಕಡೆಗಳಿಂದ ತುಂಬಿದ ವರದಕ್ಷಿಣೆಯ ಹಸ್ತಗಳ ಎಳೆದಾಟವು ಬಲವಾದ್ದರಿಂದ ಸೆಟ್ರ ಒಪ್ಪಂದದ ಸಿಡಿಲಾದ ಸೂತ್ರವು ತುಂಡಾಗಿ ಇಂದು ಅವರ ಮನೆಯಲ್ಲಿ ಎರಡೇ ಧಾರೆ! ಒಂದು ಅವರ ಐದನೇ

ಮಗಳು ಶಾಂಭವಿಗೆ. ಇನ್ನೊಂದು ಮಗಳ ಮಗಳು ರಾಜೀವಿಗೆ. ೬೫ ವರ್ಷ ಪ್ರಾಯದ ಸೆಟ್ರಿಗೆ ಶಾಂಭವಿಯು ಐದನೇ ಮಗಳಾದರೂ ಅವರ ೩೫ನೇ ವರ್ಷದಲ್ಲಿ ಹುಟ್ಟಿದವಳಂತೆ. ಬಹುಕಾಲದಿಂದ ದಹಿಸುತ್ತಿದ್ದ ವಿರಹಾಗ್ನಿಯು ಕುರುಹಾಗಿ ಅವಳ ಮುಖವೆಲ್ಲಾ ನೆರಿಗೆ ಬಿದ್ದಿತ್ತು. ಮಗಳ ಮದುವೆಯ ವಿಷಯದಲ್ಲಿ ಶೆಟ್ಟರು ಈ ವರೆಗೂ ಉದಾಸೀನದಿಂದಿದ್ದರೆನ್ನಲಾಗುವುದಿಲ್ಲ. ಈ ಕುರಿತು ಬಹಳ ವರ್ಷಗಳಿಂದಲೂ ಮಂದಗಮನದಿಂದ ನಡೆಯುತ್ತಿದ್ದ ಶೆಟ್ರ ಆಲೋಚನೆಯು ಕೆಲವು ವರ್ಷಗಳಿಂದೀಚೆಗೆ ತೀವ್ರ ಸಂಚಾರಿಯಾಗಿತ್ತು. ಆದರೆ ಪ್ರತಿಸಲವೂ ಯಾವುದಾದರೊಂದು ಎಡರುಗಳು ತಪ್ಪದೆ ಬರುತ್ತಿದ್ದು, ಈ ವಿವಾಹವನ್ನು ಸೆಟ್ರು ವರ್ಷದಿಂದ ವರ್ಷಕ್ಕೆ ಮುಂದೂಡುತ್ತಿದ್ದರು. ಇತ್ತೀಚೆಗೆ ಅವರ ಇತರ ಸೊಸೆ ಮಕ್ಕಳೂ ವಿವಾಹಕ್ಕೆ ಬೆಳೆದುದರಿಂದ ದೊಡ್ಡ ಧಾರೆಯ ಮದುವೆಯೊಂದನ್ನೆಬ್ಬಿಸಿ ಕೊಪ್ಪರಿಗೆಯೊಡನೆ ಕವಳಿಗೆಗಳನ್ನೆಲ್ಲಾ ತೊಳೆದುಬಿಡಬೇಕೆಂದು ನೆನಸಿದ್ದರು. ಆದರೆ ಹೊಸ ನೆಂಟಸ್ತಿಕೆಗಳಿಲ್ಲಾ. ಒಂದೊಂದೇ ಸಡಿಲಾಗಿ ಇನ್ನು ಮುಂದರಿಸಲಸಾಧ್ಯವಾದ ಶಾಂಭವಿಯ ಮದುವೆಯನ್ನಾದರೂ ಮಾಡಿಬಿಡುವದೆಂದು ನಿಶ್ಚಯಿಸಿದರು. 'ಉಡಲು ಪೀತಾಂಬರವೇ ಆಗಬೇಕು. ಕ್ರಯ ಎರಡೇ ರೂಪಾಯಿ' ಎಂಬಂತೆ ಧನವಂತ ವಿದ್ಯಾವಂತ ಹುಡುಗನಾಗಬೇಕು. ವರದಕ್ಷಿಣೆ ಎರಡು ಸಾವಿರದೊಳಗಿರಬೇಕು. ಎಂದು ಈ ವರೆಗೆ ಹುಡುಕುತ್ತಿದ್ದ ಸೆಟ್ಟರು ಈಗ ಹ್ಯಾಗಾದರೂ ವಿವಾಹವನ್ನೊಮ್ಮೆ ಮಾಡಿಬಿಡುವೆನೆಂದು ಚಡಪಡಿಸಹತ್ತಿದರು. ಕಡೆಗೆ ಅವರಿವರನ್ನು ಬಿಟ್ಟು ಹತ್ತಿರದ ಸಂಬಂಧಿಯೊಬ್ಬನನ್ನು ಹಿಡಿಯಬೇಕಾಯಿತು. ಶಾಂಭವಿಯ ಅಕ್ಕಂದಿರಲ್ಲಿ ಒಬ್ಬರನಂತರ ಒಬ್ಬರನ್ನು ಕ್ರಮಪ್ರಕಾರವಾಗಿ, ಮೆಟ್ಟಲು ಇಳಿದಂತೆ ಮೂರು ಮಂದಿಯನ್ನೂ ವಿವಾಹವಾಗಿ ಐದಾರು ಮಕ್ಕಳ ತಂದೆಯೆನಿಸಿ, ಸಂಸಾರಸುಖದ ಹಳೇ ಅನುಭವಿಯೂ ಶಾಂಭವಿಯ ಕುಟುಂಬದ ಸ್ತ್ರೀಯರ ಆಳ್ವಿಕೆಯಲ್ಲಿ ತೇರ್ಗಡೆ ಹೊಂದಿದವರೂ ಆದ, ನವವಿಧುರ ಲಿಂಗಪ್ಪ ಹೆಗ್ಡೆಯವರೇ ಪುನಃ ಚುನಾಯಿಸಲ್ಪಟ್ಟರು. ಒಂದಲ್ಲ ಎರಡಲ್ಲ ಮೂರುಸಲ ಪದಚ್ಯುತರಾದರೂ ಪುನಃ ಸೆಟ್ರ ಅಳಿಯತನದ ಗದ್ದುಗೆಗೆ ಹೆಗ್ಡೆಯವರೇ ಆರಿಸಲ್ಪಟ್ಟದ್ದನ್ನು ನೋಡುವಾಗ ಲಿಂಗಪ್ಪಹೆಗ್ಡೆಯವರ ಮೇಲೆ ಅವರ ನೆಂಟರಿಗಿರುವ ವಿಶ್ವಾಸವು ವ್ಯಕ್ತವಾಗುತ್ತದೆ! ಬೇಗನೆ

ಮುರಿದುಬಿದ್ದು ತನ್ನನ್ನು ಶೋಕವೆಂಬುವ ಕೆಳಗಿನ ಮಡುವಿಗೆ ಹಾಕುವ ಈ ಕುಂಬು ಕಟ್ಟೆಗೆಯನ್ನೇ ತನಗೆ ಆಧಾರಕ್ಕೆ ಕೊಡುವರೇ ಎಂದು ಶಾಂಭವಿಯು ಎಲ್ಲಿಯಾದರೂ ಕಣ್ಣೀರು ಸುರಿಸಿದರೆ "ನಿನ್ನನ್ನು—ಮುದುಕಿಯನ್ನು ಇನ್ನು ಯಾರು 'ಕಾರ್ಕಳ'ದವನು ಕೊಂಡುಹೋಗುವುದೋ?" ಎಂದು ಇಷ್ಟರ ತನಕ ತಾಳ್ಮೆಯಿಂದ ಇದ್ದುದೂ ಅವಳ ಅಪರಾಧವೆಂಬಂತೆ ತಾಯಿಯೊಮ್ಮೆ ಗದರಿಸಿ ಬಿಟ್ಟಳೆಂದರೆ, ಪಾಪ! ಆ ಅನಾಥೆಯು ನಿರುಪಾಯಳಾಗಿ ಕೂತುಕೊಳ್ಳ ಬೇಕಾಗುತ್ತಿತ್ತು. ಇನ್ನೊಂದು ಧಾರೆಯೆಂದರೆ ಸೆಟ್ರ ಮಗಳ ನಾಲ್ಕು ವರ್ಷದ ಮಗುವಿಗೆ. ಅವರ ಮಗನ ಒಂಭತ್ತು ವರ್ಷದ ಹುಡುಗನೇ ವರನು. ತಾನು ಸಾಯುವ ಮೊದಲು ಮೊಮ್ಮಗಳ ಮದುವೆಯನ್ನು ನೋಡ ಬೇಕೆಂದು ಮುತ್ತಜ್ಜಿಯು ಒತ್ತಾಯ. ನೆಲಮುಟ್ಟಲು ಆರೇ ಇಂಚು ಇರುವ ವರೆಗೆ ಬಾಗಿದ ಬೆನ್ನಿನಿಂದ ಅಲ್ಲಿಂದಲೇ ಮೊಮ್ಮಗಳಿಗೊಮ್ಮೆ ಸೇಸೆ ಹಾಕಿಸು ತ್ತೇನೆಂದರೆ ಸ್ವರ್ಗವನ್ನೇ ಸೇರುವೆನೆಂದು ಮುದುಕಿಯ ಆಶೆ. ಧಾರೆಯು ಮಣೆಯಲ್ಲಿ ಕುಳಿತ ಸುಖವು ಮರೆಯಾಗುತ್ತಾ ಬರುತ್ತಿರುವಾಗ, ಇನ್ನೊಮ್ಮೆ ಮಗಳೊಡನೆ ಶೃಂಗರಿಸಿಕೊಂಡು ಮಣೆಯಲ್ಲಿ ಕುಳಿತುಕೊಳ್ಳುವ ಸಂತೋಷ ವನ್ನು ಮಗುವಿನ ತಾಯಿ ಬೇಡವೆನ್ನುವಳೇ?

ಸೆಟ್ಟರಂತೂ ಚಿಕ್ಕಂದಿನಲ್ಲಿಯೇ ಮದುವೆಮಾಡಿ ಬಿಡದಿದ್ದರೆ ಆಗುವ ಪೇಚಾಟವನ್ನು ಅನುಭವದಿಂದಲೇ ಕಂಡುಕೊಂಡಿರುವರು. ಇನ್ನು ಈ ವರೆಗೆ ಮದುವೆಯಾಟ ಮಾಡಿ ಮಣ್ಣಿನಲ್ಲಿ ಆಡುತ್ತಿದ್ದ ಮಕ್ಕಳು ಇಂದು ಗಂಡಹೆಂಡಿ ರಾಗಿ ಮುಂಡಾಸು ಜಡೆಗೊಂಡೆಗಳ ಅಲಂಕಾರದಿಂದ ಮುದ್ದಾಗಿ ಧಾರೆಮಣೆ ಯಲ್ಲಿ ಕುಳಿತುಕೊಳ್ಳುವುದನ್ನು ನೋಡುವ ನಯನಾನಂದವು ಯಾರಿಗೆ ಬೇಡ? ತಂದೆತಾಯಿಗಳಂತೂ "ಹೋಗುವ ದೋಣಿಯಲ್ಲಿ ಸಾಗುವ ಸರಕೆ"ಂಬಂತೆ ಈ ದೊಡ್ಡ ಖರ್ಚಿನೊಡನೆ ಇದೊಂದೂ ತಿಳಿಯದಂತೆ ಸೇರಿಹೋದ ಹಾಗಾ ಯಿತು. ಇಲ್ಲಿ ಆಕ್ಷೇಪ ಬರಬೇಕಾದರೆ ಹುಡುಗನ ತಂದೆಯ ಕಡೆಯಿಂದ. ಮುಂದಕ್ಕೆ ಬೆಳೆದು ದೊಡ್ಡದಾಗತಕ್ಕ ವರದಕ್ಷಿಣೆಯ ಫಲವನ್ನು ತೆನೆ ಯಲ್ಲಿಯೇ ಕೊಯ್ದುಬಿಡಲು ಅವನಿಗಿಷ್ಟವಿಲ್ಲದಿರುವುದು ಸ್ವಾಭಾವಿಕ. "ಹುಡುಗನಿಗಾಗಲೀ ಹುಡುಗಿಗಾಗಲೀ ಇಷ್ಟು ಬೇಗನೇ ವಿವಾಹವಾಗುವ ಆವಶ್ಯಕತೆಯೇನು?" ಎಂಬ ನೆವನವನ್ನೊಡ್ಡಿ ಆತನು ಎಲ್ಲಿಯಾದರೊಮ್ಮೆ

ಮಾತುಕಥೆಗಳ ಮಧ್ಯದಲ್ಲಿ ತನ್ನ ಅಸಮ್ಮತಿಯನ್ನು ಸೂಚಿಸಿದರೆ, "ಅದಲ್ಲದೆ, ಅನಾವಶ್ಯಕ ಆಗುವ ಎರಡು ಖರ್ಚನ್ನು ಉಳಿಸಿದಂತಾಗುವುದಿಲ್ಲವೆ? ಆಗುತ್ತದೆ ಒಟ್ಟಿಗೆ" ಎಂದು ಸೆಟ್ರು ಮಧ್ಯದಲ್ಲಿಯೇ ಬಾಯಿ ಹಾಕುತ್ತಿದ್ದರು. ಹುಡುಗನ ತಾಯಿಯಂತೂ ಮುಂದರಿದು "ಮೆಂದೆ ಯಾರೋ ಏನೋ! ಮನೆಯಲ್ಲಿ ವಿವಾಹವಾಗುವಾಗ ನಮ್ಮ ಹುಡುಗನಿಗೂ ಆಗುವುದು ಚಂದವಲ್ಲವೆ? ಇವನಿಗೀಗ ಒಂಬತ್ತು ವರ್ಷ ತುಂಬಿದೆ. ನೆರೆಯ ಸುಬ್ಬಕ್ಕನ ಮಗನಿಗೆ ಏಳೇ ವರ್ಷದಲ್ಲಿ ಮದುವೆಯಾಗಿದೆ" ಎಂದು ಉತ್ಸಾಹದಿಂದ ಮುಗುಳ್ನಗೆ ನಕ್ಕು ಸೆಟ್ರ ಸೂಚನೆಯನ್ನು ಅನುಮೋದಿಸುತ್ತಿದ್ದಳು.

ಅಂತೂ ಇಂದೇ ವಿವಾಹ ದಿನ. ಧಾರೆಗಿಂತ ಸ್ವಲ್ಪ ಮೊದಲು ತನ್ನ ಕುತ್ತಿಗೆಯಲ್ಲಿದ್ದ ಮಿರಿಮಿರಿ ಮಿಂಚುವ ಕಂಠೀಸರವನ್ನು ಮೆಲ್ಲಗೆ ತೆಗೆದು ಆಡುತ್ತಿದ್ದ ಅಂದಿನ ಮದುವಣಿಗ ಹುಡುಗನೊಡನೆ ಅದನ್ನು ತನಗೆ ಕೊಡಬೇಕೆಂದು ವಧುವಾಗತಕ್ಕ ಮಗುವು ಛಲಹಿಡಿದು ಎರಡೂ ಕಚ್ಚಾಡಿಕೊಂಡು ಬೊಬ್ಬೆಯೆಬ್ಬಿಸಿ ಅಳುತ್ತಿರುವಾಗ ಆ ಮಕ್ಕಳ ತಾಯಂದಿರಿಗೆ ಅವನ್ನು ಸಂತೈಸಲು ಸಾಕುಸಾಕಾಯಿತಂತೆ.

ಔತಣಸಮಾರಂಭವು ಮುಗಿದು ರಾತ್ರೆ ಹತ್ತು ಘಂಟೆಗೆ ಧಾರೆ. ವಧೂವರರನ್ನು ಶೃಂಗರಿಸಿ ಧಾರೆಯ ಮಂಟಪದಲ್ಲಿ ಕುಳ್ಳಿರಿಸಿದ್ದಾರೆ. ಸಣ್ಣ ವಧುವಿನ ತಾಯಿಯು ಮಣೆಯಲ್ಲಿ ಕುಳಿತು ಮಗುವನ್ನೆತ್ತಿಕೊಂಡು, ಅಳದಂತೆ ಸಂತೈಸುತ್ತಿದ್ದಾಳೆ. ತನ್ನ ಜೀವನವನ್ನೇ ಕೆಡಿಸುವ ದೊಡ್ಡ ಬಂಧನವಿದು ಎಂಬುದನ್ನರಿಯದ ಆ ಎಳೇ ಮಗುವು, ಸ್ವೇಚ್ಛೆಯಿಂದಾಡುತ್ತಿದ್ದ ತನ್ನನ್ನು ಈ ರೀತಿ ಏನೇನೋ ಮಾಡಿ ಹಿಡಿದುಬಿಟ್ಟದ್ದಾರೇಕೆಂಬ ಸದ್ಯದ ಬಂಧನಕ್ಕಾಗಿಯೇ ಒಂದೇ ಸಮನೆ ರೋದಿಸುತ್ತಿದೆ. ವರನಾದ ಹುಡುಗನಿಗಾದರೂ ಯಾವ ಸಮುದಾಯಿಸುವಿಕೆಯ ಅಗತ್ಯವೂ ಇರಲಿಲ್ಲ. ಧಾರೆಯ ಮಣೆಯಲ್ಲಿ ಎತ್ತಿ ಕುಳ್ಳಿರಿಸಿದ್ದೊಂದೇ ತಡ. ತನ್ನ ಮೈ ಕೈಯ ಆಭರಣಗಳ ಚಂದ, ತಲೆಯ ಜರಿ ಮುಂಡಾಸಿನ ಹೊಳಪು, ಮದುವೆ ಚಪ್ಪರದ ಕನ್ನಡಿ, 'ಗ್ಲಾಸು,' 'ಗ್ಯಾಸ್' ದೀಪಗಳ ಪ್ರಕಾಶ, ಇವುಗಳ ಆಕರ್ಷಣದಿಂದ ತಟಸ್ಥವಾಗಿ ದುರದುರನೆ ನೋಡುತ್ತಿದ್ದನು.

ಹತ್ತಿರದ ಇನ್ನೊಂದು ಮಣೆಯಲ್ಲಿ ಕೆಂಪು ಮುಂಡಾಸು, ಬಿಳಿ ಮೀಸೆ

ಗಳ ಹೊಳಪಿನ ಲಿಂಗಪ್ಪ ಹೆಗ್ಡೆಯುವರು ನಾಲ್ಕನೇ ಸಲದ ಹೊಸ ಮದುವಣಿಗನಾಗಿ 'ತನಗೆ ಧಾರೆಯು ಮಣೆಯೊಂದರೆ ನಿತ್ಯದ ಕಾಲುಮಣೆಯುಷ್ಟು ಸುಲಭ' ವೆಂಬಂತೆ ಅಲಕ್ಷ್ಯಭಾವದಿಂದ ಕುಳಿತಿದ್ದಾರೆ. ಈ ವರೆಗೆ ಅನುಭವಿಸುತ್ತಿದ್ದ ಹಳೆಯ ದುಃಖದ ಮಡುವಿನಿಂದೆದ್ದು, ಇನ್ನೊಂದು ಹೊಸ ಶೋಕದ ಕುಂಡದಲ್ಲಿ ಬೀಳಲಿಕ್ಕಿರುವ ವಧುವು ಬಳಿಯಲ್ಲೇ ಕುಳಿತು, ತಲೆ ಬಗ್ಗಿಸಿ, ಕಣ್ಣೀರು ಸುರಿಸುತ್ತಿದ್ದಾಳೆ. ಅಲ್ಲೇ ಚಪ್ಪರದ ಒಂದು ಮೂಲೆಯಲ್ಲಿ ಈಗ ತಾನೇ ಬಿಸಿ ಕಾಫಿಯನ್ನು ಕುಡಿದು, ಸಾಲದುದಕ್ಕೆ ಸಿಗರೇಟಿನ ಹೊಗೆಯನ್ನು ಬಿಡುತ್ತಿದ್ದ ನವನಾಗರಿಕ ತರುಣರದೊಂದು ಸಭೆ. ಒಬ್ಬೊಬ್ಬರೇ ಹರಟೆ ಹೊಡೆಯುತ್ತಿದ್ದಾಗ "ಅದಿರಲಿ" ಅಲ್ಲಿ ನೋಡಿ ಆ ನವವಧುವನ್ನು! ಮುದುಕಿಗೂ ಮುದುಕನಿಗೂ ಮದುವೆ! ಹಲ್ಲು ಮುರಿದ ಆ ಮುದುಕನಿಗೇಕಯ್ಯಾ ಈ ಕಾರ್ಬಾರು? ಮದುವೆಯಾಗಿ ಹುಡುಗಿ ತರುವುದೆಂದರೆ ಎಲೆಅಡಿಕೆ ಪುಡಿ ಮಾಡಲು ಒಂದು ಜನ ತರುವುದೆಂದೇ ಇವನ ಭಾವನೆಯೋ ಹೇಗೆ"? ಎಂದು ಒಬ್ಬ ತರುಣನು ಪ್ರಶ್ನಿಸಿದನು. ಎಲ್ಲರೂ ಗೊಳ್ಳೆಂದು ನಕ್ಕುಬಿಟ್ಟರು. "ನಿಮಗೆ ತಮಾಷೆಯಾಗುತ್ತದೆ," ಏನೆಂದರಿಯದ ಆ ಎಳೆಮಕ್ಕಳನ್ನು ಈ ರೀತಿಯಲ್ಲಿ ವಿವಾಹಪಾಶದಿಂದ ಬಂಧಿಸಿಬಿಡುವುದು ಎಂತಹ ಅನ್ಯಾಯ ನೋಡಿ!" ಎಂದನೊಬ್ಬ ವಿಚಾರಿ. "ಈ ರೋಗಕ್ಕೆ ಒಂದು ಒಳ್ಳೇ ಮದ್ದು ತಯಾರಾಗಿದೆ. ಶಾರದರ ಬಿಲನ್ನು ಸರಕಾರವು ಕೈಗೆ ತೆಗೆದುಕೊಂಡು ಇಂಥಾ ವಿವಾಹಕರ್ತರ ಮೇಲೆ ತೀವ್ರ ಬಾಣಬಿಡಲು ಆಕರ್ಣಾಂತವಾಗಿ ಸೆಳೆದು ತಯಾರಾಗಿ ಕುಳಿತಿದೆ. ಆದರೆ ಇಷ್ಟರ ವರೆಗೆ ಕೊರಗಿಕೊರಗಿ ಈಗ ಆ ಮುದುಕನ ಕೈಹಿಡಿದು ಪಾಪ! ಆ ಬಡ ಪ್ರಾಣಿಯು ಯಾವ ಸುಖವನ್ನು ಉಣ್ಣಬಹುದು?" ಎಂದು ಒಬ್ಬ ತರುಣನು ಉದ್ಗರಿಸಿದನು. 'ಇದಕ್ಕೊಂದು ಕಾನೂನಾಗಬೇಕಯ್ಯ. ವಿವಾಹವಾಗಲಿಚ್ಛಿಸುವ ಸ್ತ್ರೀಯರಿಗೆ ೨೦ ವರ್ಷದೊಳಗೆ ವಿವಾಹವಾಗಬೇಕು. ಹಾಗೆಯೇ ೪೦ ವರ್ಷ ದಾಟಿದ ಮುದುಕನೂ ವಿವಾಹವಾಗಬಾರದು." ಎಂದು ಒಬ್ಬ ಸುಧಾರಕ ತರುಣನು ಹೇಳುತ್ತಲೇ "ಅದು ಹೌದು. ಈ ಅನ್ಯಾಯವು ಹೋಗಲೇ ಬೇಕು" ಎಂದು ಎಲ್ಲರೂ ಅನುಮೋದಿಸಿದರು. ಈ ತರುಣರ ಸಭೆಯೋ ಎಸೆಂಬ್ಲಿಯಾಗುತಿದ್ದರೆ?...... ಸೆಟ್ಟರ ಮನೆಯ ಮದುವೆಯಂತೂ ಆಗಿಹೋಯಿತು.

# ನಮ್ಮೂರ ಐಗಳು

ನಮ್ಮ ವಿಶ್ವನಾಥ ಐಗಳೆಂದರೆ ಸಕಲ ಜ್ಞಾನಸಂಗ್ರಹವುಳ್ಳ ಸಜೀವ ವಿಶ್ವಕೋಶವೆಂದೇ ಜನಸಾಮಾನ್ಯರ ಮಾತು. ಅವರಿಗೆ ಓದುಬರಹವು ಚೆನ್ನಾಗಿ ಗೊತ್ತಿತ್ತು. ೩ ಭಾಷೆಗಳ ಅಕ್ಷರಮಾಲೆಯು ಸರಿಯಾದ ಜ್ಞಾನವಿತ್ತು; ೩ ನುಡಿಗಳ ವ್ಯವಹಾರಜ್ಞಾನವಿತ್ತು. ಕೂಳೂರು ಗ್ರಾಮದ ಜನರೆಲ್ಲಾ ಐಗಳನ್ನು ತಮ್ಮ ಪಾಲಿನ ಬೃಹಸ್ಪತ್ಯಾಚಾರ್ಯರೆಂದೇ ನಂಬಿಕೊಂಡು ಸನ್ಮಾನಿಸುತ್ತಿದ್ದರು ಯಾವನಾದರೊಬ್ಬ ಗ್ರಾಮಸ್ಥನು ಯಾರಿಗಾದರೊಂದು, ಯಾವುದೇ ಒಂದು ವಿಧದ ಕಾಗದ ಬರೆಯುತ್ತಿದ್ದರೂ ಅದು ವಿಶ್ವನಾಥ ಐಗಳ ಗಮನಕ್ಕೆ ಬಾರದೆ ಹೋಗುತ್ತಿದ್ದಿಲ್ಲ. ಐಗಳು ಕೂಳೂರು ಗ್ರಾಮಸ್ಥರ ಗುಮಾಸ್ತರು, ಶಾಲೆಯ ಶಿಕ್ಷಕರು, ಟಪ್ಪಾಲು ಕಟ್ಟೆಯ ಪೋಸ್ಟುಮಾಸ್ತರರು, ವ್ಯಾಜ್ಯಗಳಲ್ಲೆಲ್ಲಾ ಒಳ ವಕೀಲರು. ಸಾಲದುದಕ್ಕೆ ವಾಚನ ಪಾರಾಯಣ ಭಟ್ಟರು! ಜಾತಕ ನೋಡುವ ಜೋಯಿಸರು! ನಿಮಿತ್ತ ಮಾಟಾದಿಗಳ ಮಂತ್ರವಾದಿಯೂ ಅವರೇ! ಅರ್ಜಿ, ನೋಟು, ರಶೀದಿ, ವಿಳಾಸಗಳಲ್ಲದೆ ತಳ್ಳಿ ಅರ್ಜಿ, ಸುಳ್ಳು ಕಾಗದಪತ್ರ ಮೊದಲಾದವುಗಳಿಗೆಲ್ಲಾ ಆ ಹಳ್ಳಿಗರಿಗೆ ಐಗಳೇ ಆಶ್ರಯದಾತರು. ಅನೇಕ ವೇಳೆ ನಮ್ಮ ಐಗಳು ತನ್ನ ಐಗಳ ಮಠದಲ್ಲಿ ಸೊಂಡಿಲಿಲ್ಲದ ಲಂಬೋದರನಂತೆ ಕುಳಿತು ಬಾಳೆಹಣ್ಣು, ತೆಂಗಿನ ಕಾಯಿ, ಸೂರಣ ಗಡ್ಡೆ, ಹಲಸಿನ ಹಣ್ಣು ಮೊದಲಾದ ಕಾಣಿಕೆಗಳನ್ನು ಸಂತೋಷದಿಂದ ಸ್ವೀಕರಿಸಿ, ತನ್ನ ಭಕ್ತವೃಂದದಿಂದಾವರಿತರಾಗಿ, ದೊರಗು ಕಾಗದದ ಮೇಲೆ, ಗರಿಯಿಂದ ಕರಕರನೆ ಬರೆಯುತ್ತಿರುವುದನ್ನು ನೋಡಬಹುದು. ಐಗಳು ಒಮ್ಮೊಮ್ಮೆ ತನ್ನ ತಳ್ಳಿ ಅರ್ಜಿಗಳ ಬ್ರಹ್ಮಾಸ್ತ್ರ ಉಪಯೋಗಮಾಡಿ ಶ್ಯಾನುಭಾಗ ಮಣೆಗಾರರುಗಳನ್ನು ಗಡಗುಟ್ಟ ನಡುಗಿಸಿ ಬಿಡುತ್ತಿದ್ದರು. ಇಡೀ ಗ್ರಾಮದ ಅಧಿದೇವತೆಯೇ ತಾನೆಂಬಂತೆ ಗ್ರಾಮದಲ್ಲಿ ಹುಟ್ಟಿದಕ್ಕೂ ಸತ್ತುದಕ್ಕೂ ಐಗಳ ಉಪಾಸನೆ ನಡೆಯಲೇಬೇಕು. ಕೂಳೂರು ಶ್ಯಾನುಭಾಗರಿಗೆ ವಿಶ್ವನಾಥ ಐಗಳೆಂದರೆ ಹಾವು ಮುಂಗಸಿಯನ್ನು ಕಂಡಂತಾ

ಗುತ್ತಿತ್ತು. ಅವರನ್ನವರು ಸದಾ ದೂಷಿಸಿ ಸಂದರ್ಭ ದೊರೆತಾಗಲ್ಲೆಲ್ಲಾ ಐಗಳ ಕೇವಲ 'ಢೋಂಗಿ' ಜನವೆಂದು ದೃಢಪಡಿಸಲು ಹಲವು ವಿಧದಿಂದ ಪ್ರಯತ್ನಿಸುತ್ತಿದ್ದರು. ಆದರೆ ಐಗಳು ಎಲ್ಲಾ ಜನರಿಗೂ ಬೇಕಾದವರಾಗಿದ್ದರು. ನಾಳೆ ಐಗಳು ತೀರಿಹೋದರೆ ನಾಡದು ಕೂಳೂರು ಗ್ರಾಮವೇ ಕಾಲಚಕ್ರದ ಉರುಳಾಟದಿಂದ ಕಳಚಿಬಿದ್ದು, ಕಾರ್ಯಕಲಾಪಶೂನ್ಯವಾಗುವುದೋ ಎಂಬ ಸಂಶಯವುಂಟಾಗುತ್ತಿತ್ತು. ಐಗಳು ಇಷ್ಟೊಂದು ಪ್ರಾಮುಖ್ಯರಾಗಿದ್ದರೂ ಅಧಿಕಾರ ದರ್ಪವೂ, ಶ್ರೀಮಂತಿಕೆಯ ದೌಲತ್ತೂ, ಹಳ್ಳಿಗರ ಆಡಂಬರವೂ ಅವರಲ್ಲಿರಲಿಲ್ಲ. ಅವರು ಬರೇ ಸರಳ ಐಗಳಾಗಿದ್ದು, ಹಳ್ಳಿಯ ಮಕ್ಕಳಿಗೆಲ್ಲಾ ಕನ್ನಡ ಸಂಸ್ಕೃತಗಳನ್ನು ಕಲಿಸುತ್ತಿದ್ದರು. ಆದರೆ ಕೆಲವೊಮ್ಮೆ ಗ್ರಾಮಸ್ಥರ ಬಲವಂತದಿಂದ ಅವರಿಗೆ ಇಂಗ್ಲಿಷನ್ನೂ ಕಲಿಸದೆ ನಿರ್ವಾಹವಿಲ್ಲದಾಗಿತ್ತು. ಆಗ ಎ. ಬಿ. ಸಿ. ಡಿ. ಎಂಬ ಕುಂಬಳಕಾಯಿಯಂತಹ ಅಕ್ಷರಗಳು ಬೋರ್ಡಿನಲ್ಲಿ ಕಂಗೊಳಿಸುತ್ತಿದ್ದವು.

ತನ್ನ ಶಿಷ್ಯರಾಗಿದ್ದು ಉಚ್ಚ ಉದ್ಯೋಗಪಡೆದವರ ಕುರಿತೆಲ್ಲಾ ವಿಶ್ವನಾಥ ಐಗಳಿಗೆ ಹೇಳಿ ಹೆಗ್ಗಳಿಕೆಪಟ್ಟಷ್ಟು ಸಾಲದು. ಅವರ ವಿದ್ಯೆ, ಬುದ್ಧಿವಂತಿಕೆ; ಗೌರವಗಳಿಗೆಲ್ಲಾ ತನ್ನ ಚಿಕ್ಕಂದಿನ ತರಬೇತೇ ಮೂಲಕಾರಣವೆಂಬುದು ಐಗಳ ಪಲ್ಲವಿಯಾಗಿದ್ದಿತು. 'ಬೆತ್ತ ಉಳಿಸಿ, ಮಗುವ ಕೆಡಿಸಿ' ಎಂಬ ತತ್ವವು ಐಗಳ ಶಿಕ್ಷಣದ ಬೀಜಮಂತ್ರವು. ವಿಶ್ವನಾಥ ಐಗಳ ಬೆತ್ತದ ಸವಿನೋಡದ ಕೂಳೂರಿನ ಜನರೆಂದರೆ ಅತಿ ಸ್ವಲ್ಪವೇ ಸರಿ. ವೇತ್ರಹಸ್ತನಾದ ಶಿಕ್ಷಕನು ಮಂತ್ರ ಕೋಲು ಹಿಡಿದ ಮಾಂತ್ರಿಕನಂತೆಂದು ಐಗಳ ದೃಢನಿರ್ಧಾರ. 'ಮರ್ದನಂ ಗುಣ ವರ್ಧನಂ' ಎಂಬುದೇ ಅವರ ಶಿಕ್ಷಣ ಸಂಗೀತದ ಪಲ್ಲವಿ.

ವಿಶ್ವನಾಥ ಐಗಳ ೬೦ ವರ್ಷಗಳ ಅಧ್ಯಾಪಕತನವು ಕೂಳೂರಿಗರನ್ನು ನಾಗರೀಕತನಕ್ಕೆ ಒಂದಿಷ್ಟಾದರೂ ಹತ್ತಿರ ತರಲಿಲ್ಲ. ಐಗಳು ಪುರಾತನಸತ್ವದ ಭದ್ರವಾದ ಕೋಟೆಯನ್ನು ಕಾಯುವ ದ್ವಾರಪಾಲಕರಾಗಿ ನಿಂತು, ತನ್ನ ಹಳಿಯಲ್ಲಾರಿಗಾದರೂ ಪಟ್ಟಣದ ಗಾಳಿಬೀಸಿತೆಂದರೆ ಅದಕ್ಕೆ ತಕ್ಕ ನಿವಾರಣೋಪಾಯವನ್ನು ತಕ್ಷಣ ಕೈಕೊಳ್ಳುತ್ತಿದ್ದರು. ಶಾಲೆಯಲ್ಲಿ ಐಗಳು ಕರಾಳ ರುದ್ರಾವತಾರಿಯೇ ಸರಿ. ಅವರೇನಾದರೂ ಕಲಿಸಿದುದನ್ನು ಹುಡುಗರು ಒಮ್ಮೆಯೇ ತಿಳಿದುಕೊಳ್ಳಬೇಕು. ಹಾಗೆ ತಿಳಿಯದ ಮಂದಬುದ್ಧಿಯವರಾರಾ

ದರೂ ಇದ್ದರೆ ಅವರ ಬುದ್ಧಿ ತೀಕ್ಷ್ಣಗೊಳಿಸಲು ಕೈಗಳನ್ನು ಸರಿ ಚಿತ್ತದ ಸಾಣೆಗೆ ಕೊಡುತ್ತಿದ್ದರು.

ಆದರೆ ಈ ಲೋಕದಲ್ಲಿ ಯಾವುದೂ ಸ್ಥಿರವಾಗಿರುವದಿಲ್ಲ. ವಿಶ್ವ ಚಕ್ರದ ಉರುಳಾಟದಲ್ಲಿ ಉನ್ನತಿ ಅವನತಿ ಎಂಬ ದ್ವಂದ್ವದ ನಿಯಮಕ್ಕೆ ಎಲ್ಲರೂ ಒಳಗಾಗಲೇಬೇಕು. ನಮ್ಮ ಅಧಿದೇವತೆಗೂ ಈ ದುರ್ದೈವವು ತಪ್ಪ ಲಿಲ್ಲ. ಅವರ ಗತವೈಭವವು ಹೊಸ ನಾಗರೀಕತೆಯ ಸೂರ್ಯನಿದಿರಲ್ಲಿ ಮಂಜಿ ನಂತೆ ಮಾಯವಾಯಿತು. ಮೊದಲಿನ ಗೌರವವು ಕುಂದಿತು. ಅವರ ಐಗಳ ಮಠವು 'ಗ್ರೇಂಟ್' ಕೊಡಲ್ಪಡುವ ಶಾಲೆಯಾಗಿದ್ದಿತು. ಐಗಳು ಕೊಡುವ 'ಪಸ್ಟ್‌ಕ್ಲಾಸ್' ತುಪ್ಪದ ಆಶೆಯಿಂದ ಇನ್‌ಸ್ಪೆಕ್ಟರರು ಆಗಾಗ್ಗೆ 'ವಿಸಿಟ್' ಕೊಡುತ್ತಿದ್ದರು. ವಿಶ್ವನಾಥ ಐಗಳರ ದುರದೃಷ್ಟದೆಸೆಯಿಂದ ಈ ಹಳೆ ಇನ್‌ಸ್ಪೆಕ್ಟರರೂ 'ಪೆನ್‌ಶನ್' ಪಡೆದು ನವತರುಣ ಇನ್‌ಸ್ಪೆಕ್ಟರರೊಬ್ಬರು ಐಗಳ ಶಾಲೆಗೆ ಬಂದು ಸೂರ್ಯಗ್ರಹಣದ ಕುರಿತು ಹುಡುಗರಿಗೊಂದು ಪಾಠಕೊಡಬೇಕೆಂದು ಅವರೊಡನೆ ಹೇಳಿದರು. ಐಗಳು ಹಳೆಯ ಪಂಚಾಂಗ ವೊಂದನ್ನು ತೆಗೆದು, "ಮಕ್ಕಳೆ! ಸೂರ್ಯಗ್ರಹಣವೆಂದರೆ ಸೂರ್ಯನ ವೈರಿ ಯಾದ ರಾಹುವೆಂಬ ರಾಕ್ಷಸನು ಸೂರ್ಯಬಿಂಬವನ್ನು ಸ್ವಲ್ಪ ಸ್ವಲ್ಪವಾಗಿ ನುಂಗುವುದೆಂ"ದು ಹೇಳಿದರು. ಹೊಸ ಇನ್‌ಸ್ಪೆಕ್ಟರರು ಗಹಗಹಿಸಿ ನಕ್ಕು ಬಿಟ್ಟರು. ಶಾಲೆಯ ಸುತ್ತುಮುತ್ತೂ ನೆರೆದಿದ್ದ ಜನರೆಲ್ಲಾ "ಇಂದೇನು ಐಗಳು ತಪ್ಪಿಬಿದ್ದರು? ಏನು ಸಂಗತಿಯಿದು"? ಎಂದು ವಿಸ್ಮಯಪಟ್ಟರು. ಐಗಳ ತುಪ್ಪವು ಹೊಸ ಇನ್ಸ್‌ಪೆಕ್ಟರರಲ್ಲಿ ವಿಪರೀತಪರಿಣಾಮವನ್ನುಂಟು ಮಾಡಿತು. ಶಾಲೆಯ 'ಗ್ರೇಂಟು' ನಿಲ್ಲಿಸಲ್ಪಟ್ಟಿತು. ಆದರೆ ವಿಶ್ವನಾಥ ಭಟ್ಟರು ಶಾಲೆಯನ್ನು ಎಂದಿನಂತೆ ನಡಿಸುತ್ತಿದ್ದರು.

ಆದರೆ ಪರಿಸ್ಥಿತಿಯು ತೀರಾ ಮಾರ್ಪಾಟವಾಯಿತು. ಕೊನೆಗೆ ಐಗಳಿಗೂ ಜೀವನದಲ್ಲಿ ಜುಗುಪ್ಸೆ ಹುಟ್ಟಿತು. ಅವರ ಹಳೆಯ ಶಿಷ್ಯರಾದ 'ರಾವ್ ಬಹದೂರ್ 'ದಿವಾನ್ ಬಹದೂರು'ಗಳಾರೂ ಐಗಳನ್ನು ಕಣ್ಣೆತ್ತಿ ನೋಡಲಿಲ್ಲ. ಅವರ ವಿಶ್ವಕೋಶದಂತಹ ಜ್ಞಾನಕ್ಕೆ ಈಗ ಬೆಲೆಯಿಲ್ಲದಂತಾಯಿತು. ಹುಡುಗ ಪ್ರಾಯದ ತರುಣನೊಬ್ಬನು ತಾನು ತರಬೇತಾದ ಅಧ್ಯಾಪಕನೆಂದು ಐಗಳ ಪಟ್ಟವನ್ನೇರಿದನು. ಅವನು ಸದಾ ವಿನೋದಪ್ರಿಯನು, ಕ್ಲಾಸಿನಲ್ಲಿ ಹುಡುಗ

ರಿಗೆ ಚಡಿ, ಪೆಟ್ಟು, ಕೋಲ್‌ದಂಡೆ, ಪರಂಗಿಮಂಚ ಮೊದಲಾದ ಯಾವತರದ ಶಿಕ್ಷೆಯನ್ನೂ ಕೊಡದೆ ಇಚ್ಛಾನುಸಾರ ಬಿಟ್ಟು ಅವರನ್ನೆಲ್ಲಾ ಕೂಡಿಸಿಕೊಂಡು ಮೈದಾನ, ತೋಟ, ನದಿ, ದೇವಸ್ಥಾನಗಳಿಗೆ ಕರದೊಯ್ದು ಮಕ್ಕಳಾಟಕೆ ಮಾಡುವನು. ಬಿದಿರು ಕಡ್ಡಿಗಳಿಂದ ಕಿಂಡರ್ ಗಾರ್ಟನ್ ಪಾಠಕೊಡುವನು. ಹುಡುಗರೊಂದಿಗೆ ರಬ್ಬರ್ ಚೆಂಡಾಡುತ್ತಾ ಗುಡ್ಡೆಯಲ್ಲೆಲ್ಲಾ ಓಡಾಡುವನು. ಕ್ರಾಂತಿಕಾರಕ ಅಭಿಪ್ರಾಯವನ್ನು ಮಕ್ಕಳಿಗೆ ಬೋಧಿಸಿ, ಅವಿಧೇಯತೆಯನ್ನೂ, ಅಧಿಕಪ್ರಸಂಗವನ್ನೂ ಪ್ರೋತ್ಸಾಹಿಸುವನು. ಈ ಮಕ್ಕಳಾಟಕೆಯ ಉಪಾಧ್ಯಾಯನನ್ನು ನೋಡಿ, ವಿಶ್ವನಾಥ ಐಗಳಿಗೆ ಅಸಹನೀಯವಾಯಿತು. "ಇದು ಕಲಿಕಾಲವೆಂದೂ, ಹೊಸ ಅಧ್ಯಾಪಕನೆಂದರೆ ಇಡೀ ಗ್ರಾಮಕ್ಕೊಂದು ಮಾರಿ ಸ್ವರೂಪ"ನೆಂದೂ ಐಗಳು ಎಷ್ಟೊಂದು ಹೇಳಿದರೂ ಕೇಳುವವರಾರು? ಹುಡುಗರು ಯಾವ ಒತ್ತಾಯ ಬೈಗಳು ಪೆಟ್ಟು ಇಲ್ಲದೇನೇ ಶಾಲೆಗೆ ಓಡುತ್ತಿದ್ದರು. ಅಷ್ಟಾದರೆ ಸರಿಯೆಂದು ಹೆತ್ತವರು ಸುಮ್ಮನಿದ್ದರು.

ವಿಶ್ವನಾಥ ಐಗಳು ತೀವ್ರ ವೈರಾಗ್ಯಪಟ್ಟು, ಇಡೀ ಬ್ರಹ್ಮಗಿರಿ ಗ್ರಾಮವೇ ದುರ್ಗತಿಗಿಳಿಯುತ್ತಿರುವುದೆಂದು ಕಣಿ ಹೇಳುತ್ತಿರುವರು. ಇನ್ನು ಮುಂದೆ ಬಾಲಕರು ಮೊದಲಿನಂತೆ ಶ್ರದ್ಧೆ ಭಯಭಕ್ತಿಯುಳ್ಳವರಾಗಿರದೆ ತಮ್ಮ ಗುರುಹಿರಿಯರನ್ನು ತೃಣಸಮಾನ ಕಾಣದಿರರೆಂದು ಐಗಳ ನಿರ್ಧಾರವಾಣಿ. ಹುಡುಗರಲ್ಲಿ ತೀವ್ರ ಅಧಿಕಪ್ರಸಂಗವೂ, ಅಧಿಕಾರ ನಿರಾಕರಣ ಮನೋವೃತ್ತಿಯೂ ಪ್ರಬಲವಾಗಿ, ತಾನು ಅಷ್ಟೊಂದು ಕಷ್ಟಪಟ್ಟು ರಕ್ಷಿಸಿಕೊಂಡುಬಂದಿದ್ದ ಪುರಾತನ ಸಂಪತ್ತಿಯ ಕೋಟೆಯು ಈಗ ನೆಲಸಮವಾಗುವುದನ್ನು ಕಣ್ಣಾರೆ ಕಾಣುವ ಮೊದಲು ಸಾಯುತ್ತಿದ್ದರೇನೇ ಒಳ್ಳೇದಿತ್ತೆಂಬುದೇ ಐಗಳ ಈಗಣ ಅನುನಿತ್ಯದ ಗೋಳು. ಈಗ ವಿಶ್ವನಾಥಐಗಳು ಓಲೆಯ ಪುಸ್ತಕವೊಂದನ್ನು ಹಿಡಿದು ಮನೆಚಾವಡಿ ಮೂಲೆಯೊಂದರಲ್ಲಿ ಕುಳಿತು ಏನೋ ಮಣಮಣ ಜಪಿಸುತ್ತಾ ಹಳೆಯ ಆ ವೈಭವವು ಪುನಹ ಬರುವುದೆಂಬ ಪ್ರಿಯ ಆಶೆಯುಳ್ಳವರಾಗಿರುತ್ತಾರೆ.

# ಅಂದು—ಇಂದು

ಅಂದು ಅದೊಂದು ದಿನ-ಯಾವ ದಿವಸವೆಂದು ನೆನಪಿಲ್ಲ-ನಮ್ಮೂರ ರಥೋತ್ಸವವಾಗಿತ್ತು. ಎಲ್ಲೆಲ್ಲಿಯೂ ಗದ್ದಲ. ಭಕ್ತ ಜನರು ದೇವರ ದರ್ಶನದಲ್ಲಿ ನಿರತರಾಗಿದ್ದರು. ಹೆಂಗುಸರು ಹೊಸ ಸೀರೆ ಉಟ್ಟು, ಹಣೆಗೆ ಕುಂಕುಮದ ಬೊಟ್ಟಿಟ್ಟು, ಮೈತುಂಬ ಚಿನ್ನಾಭರಣ ತೊಟ್ಟು ಹಣ್ಣು ಕಾಯಿ ಮಾಡಿಸುತ್ತಿದ್ದರು. ಅಂತೂ ಇಡೀ ಊರೇ ಲೀನವಾಗಿತ್ತು ಊರ ಉತ್ಸವದ ಉತ್ಸಾಹದಲ್ಲಿ.

ಆಗ ದೇವಸ್ಥಾನದ ಮುಖದ್ವಾರದಲ್ಲಿ ಒಮ್ಮಿಂದೊಮ್ಮೆಯೇ ಒಂದು ಗದ್ದಲವೆದ್ದಿತು. ಈ ಹಾಹಾಕಾರವೇನೆಂದು ತಿಳಿಯಲು ಜನರೆಲ್ಲಾ ಚಲ್ಲಾಪಿಲ್ಲಿಯಾಗಿ ಆ ಕಡೆಗೆ ಧಾವಿಸಿದರು. ಅಲ್ಲಿ ಒಬ್ಬಳು ಹುಡುಗಿಯನ್ನು ಇಬ್ಬರು ಯುವಕರು ಹಿಡಿದಿದ್ದರು. ಒಬ್ಬನು ರಟ್ಟೆ ಹಿಡಿದು ಕುಲುಕಿಸುತಿದ್ದ. ಇನ್ನೊಬ್ಬನು ಕಿವಿ ಹಿಡಿದು ಹಿಂಡುತಿದ್ದ. ಹುಡುಗಿಯು ಪಾಪ! ಒಂದೇ ಸವನೆ ಚೀರುತ್ತಿತ್ತು. ಆದರೂ ಅನೇಕರು ದೂರದಲ್ಲಿ ನಿಂತು, ''ಹೊಡೆಯಿರಿ ಅವಳಿಗೆ! ಬಡಿಯಿರಿ ಅವಳನ್ನು'' ಎಂದು ನಿರ್ದಯರಾಗಿ ಹೇಳುತ್ತಿದ್ದರು.

ಹುಡುಗಿಯ ಹೆಸರು ಉಮ್ಮು. ನೆರೆಗ್ರಾಮದ ಬಿಲ್ಲವ ಸುಬ್ಬನ ಮಗಳು ಅವಳು. ಇದೇ ಊರ ಹೆಮ್ಮಕ್ಕಳ ಶಾಲೆಯಲ್ಲಿ ಓದುತ್ತಿದ್ದಳು. ಅವಳಿಂದು ತಿಳಿಯದೆ ತನ್ನ ಸಂಗಾತಿಗಳೊಂದಿಗೆ ದೇವಸ್ಥಾನ ಪ್ರವೇಶಿಸಿಬಿಟ್ಟಿದ್ದಳು. ಅದನ್ನು ನೋಡಿದ ಯಾರೊ ಈ ಗಲಾಟೆಯೆಬ್ಬಿಸಿಬಿಟ್ಟರು.

ಉಮ್ಮುವನ್ನು ನಿತ್ಯಾನಂದತೀರ್ಥರ ಸನ್ನಿಧಿಗೆ ಎಳೆದೊಯ್ಯಲಾಯಿತು. ಇವರು ದೇವಸ್ಥಾನದ ಅಧಿಕಾರಿಗಳು. ಅವರ ವಸತಿಗೆ—ಅರಮನೆಯಂತಹ ಮನೆಗೆ—ಮಠವೆಂದು ಹೆಸರು. ಈ ಗದ್ದಲ ತಿಳಿದ ಊರ ಪ್ರಮುಖರನೇಕರು ಬಂದು ಮಠದಲ್ಲಿ ನೆರೆದರು. ಹುಡುಗಿಯು ಬೇಡರ ಬಲೆಯಲ್ಲಿ ಸಿಲುಕಿದ ಚಿಗರಿಯಂತೆ ಕಂಗಾಲಾಗಿ ಅಂಗಣದ ಒಂದು ಮೂಲೆಯಲ್ಲಿ ಸೆರೆಯಾಗಿ ನಿಂತಿದ್ದಳು. ಅಷ್ಟರಲ್ಲಿ ತನ್ನ ಮಗಳ ಸಮಾಚಾರವನ್ನು ಕೇಳಿದ ಸುಬ್ಬನೂ ಅಲ್ಲಿಗೆ ಬಂದು ಮುಟ್ಟಿದ.

''ಇದಕ್ಕೊಂದು ನಿವೃತ್ತಿಯಾಗಬೇಕಲ್ಲ'' ಎಂದು ಗುತ್ತಿನ ಮುತ್ತಯ್ಯ ಶೆಟ್ಟರು ಪೀಠಿಕೆಯನ್ನೆತ್ತಿದರು—ನಾಟಕದ ಸೂತ್ರಧಾರನಂತೆ!

''ಅಬ್ಬ ಬಿಲ್ಲರ ಹುಡುಗಿಯ ಸೊಕ್ಕೆ! ದೇವಸ್ಥಾನ ಪ್ರವೇಶಿಸುವಷ್ಟು ಧೈರ್ಯ ಬಂತಲ್ಲ ಅವಳಿಗೆ!'' ಎಂದು ಬೀಡಿನ ಬಲ್ಲಾಳರು ಉದ್ಗಾರವೆತ್ತಿದರು.

'ಕಲಿಕಾಲ! ಆಧುನಿಕ ವಿದ್ಯಾಭ್ಯಾಸದ ಫಲ'ವೆಂದರೊಬ್ಬರು ಪಂಡಿತರು.

''ಏನು ಸುಬ್ಬ! ನಿನ್ನ ಮಗಳ ದರ್ಪದಿಂದ ದೇವಸ್ಥಾನವೆಲ್ಲಾ ಭ್ರಷ್ಟವಾಯಿತಲ್ಲ! ನಾವಿದ್ದು ಫಲವೇನು? ಮಗಳ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತವನ್ನು ನೀನು ಅನುಭವಿಸಬೇಕಾಗಿಬಂತಲ್ಲ!'' ಎಂದು ನಿತ್ಯಾನಂದರು ಸ್ವರವೆತ್ತಿದರು.

''ಬುದ್ಧೀ! ಹುಡುಗಿ ಬುದ್ಧಿಯಿಲ್ಲದೆ ಮಾಡಿದ ಕಾರ್ಯ; ಆದರೂ ತಮ್ಮ ಚಿತ್ತ! ಅಪ್ಪಣೆಯಾದಂತೆ ನಡೆವನು ಈ ಬಡವನು'' ಎಂದು ಕೈ ಜೋಡಿಸಿ ಸುಬ್ಬ ವಿಜ್ಞಾಪಿಸಿಕೊಂಡ.

''ಸಂಪ್ರೋಕ್ಷಣೆಗೆ ಎರಡು ವರಹ; ದಂಡವಾಗಿ ಭಂಡಾರಕ್ಕೆ ಹತ್ತು ವರಹ ಕೊಡಬೇಕು'' ಎಂದರು ನಿತ್ಯಾನಂದರು.

''ಬುದ್ಧೀ! ಬಡವನ ಮೇಲೆ ಕರುಣೆದೋರಬೇಕು.'' ಕಾಲಿಗೆ ಬಿದ್ದು ಸುಬ್ಬ ಬೇಡಿದ.

''ಇವನದೆಲ್ಲಾ ಠಕ್ಕು. ಏನಿವನಿಗೆ ಮುಂಡೆಮಾರಿ! ಅಷ್ಟು ದಂಡ ಕೊಟ್ಟೇ ತೀರಬೇಕು. ಹೆಂಡದ ದುಡ್ಡು ದಂಡಕ್ಕೆ,'' ಎಂದು ಶೆಟ್ಟರು ಬಿರುನುಡಿದರು.

''ಕರುಣೆಯಿಡಿ! ನಾಳೆ ಎರಡು ವರಹಾ ಒಪ್ಪಿಸುವೆನು''—ದೀನತೆಯಿಂದ ಸುಬ್ಬ ಅರುಹಿದ.

''ಅದಾಗದು. ಅಪ್ಪಣೆಯಾದಷ್ಟನ್ನು ತಪ್ಪದೆ ಒಪ್ಪಿಸಬೇಕೀಗ."

''ನಗದಿ ಇಲ್ಲವಾದರೆ ನಗವಿದೆಯಲ್ಲ! ನಿನ್ನ ಕಿವಿ ಒಂಟಿ ತೆಗೆ. ಕೈಯ ಬಳೆ ಜಾರಿಸು. ಮಗಳ ಬೆಂಡೋಲೆ ತಪ್ಪಿಸು. ನಿಮಗೆ—ಬಿಲ್ಲವರಿಗೆ ಇಷ್ಟೊಂದು ಆಡಂಬರ. ಎಷ್ಟೊಂದು ಸೊಕ್ಕು!"

''ಸಲಿಗೆ ಕೊಟ್ಟರೆ ನಾಯಿ ನೊಸಲು ನೆಕ್ಕೀತು. ಹಿಡಿಯಿರಿ ಅವನನ್ನು! ಕಿತ್ತುಕೊಳ್ಳಿ ನಗವನ್ನು!''

ಸೇವಕರು ತಂದೆ ಮತ್ತು ಮಗಳ ಆಭರಣಗಳನ್ನು ನಿಮಿಷಮಾತ್ರದಲ್ಲಿ

ಅಪಹರಿಸಿಕೊಂಡರು! ಅವರನ್ನು ಬೀದಿಗೆ ದಬ್ಬಿಬಿಟ್ಟರು! ಹುಡುಗಿಯು ಪೆಟ್ಟಾಗಿ ಬೀದಿಯಲ್ಲಿ ಬಿತ್ತು. ಬಿದ್ದವಳನ್ನು ಇಬ್ಬರು ಬಾಲವೀರರು ಎತ್ತಿಕೊಂಡುಹೋಗಿ ಮನೆಯಲ್ಲಿ ಬಿಟ್ಟುಬಂದರು. ಸುಬ್ಬನು ಎಲ್ಲವನ್ನೂ ಜೀರ್ಣಿಸಿಕೊಂಡ.

* * * * * * * * * * * *

ಅಂದಿನಿಂದ ಶಾಲೆಗೆ ಹೋಗಬಾರದೆಂದು ತಂದೆಯ ಕಟ್ಟಪ್ಪಣೆ— ಮಗಳಿಗೆ! ಆದರೂ, ಅವಳು ಮನೆಯಲ್ಲಿ ತಾನೇ ಓದುತ್ತಲೆ ಇದ್ದಳು. ಜೊತೆಗೆ ತುಸು ಸಂಗೀತವನ್ನೂ ಅಭ್ಯಾಸಿಸುತ್ತ ಬಂದಳು. ಅವಳೀಗ ವಿದ್ಯಾ ಬುದ್ಧಿಗಳಲ್ಲಿ ಚತುರೆ. ಗಾಯನದಲ್ಲಿ ಅತ್ಯಾತುರೆ. ಪ್ರಾಯದಲ್ಲಿ ಗಿಳಿ ತುಂಬಿದ ಹೆಂಗುಸು.

ಸುಬ್ಬನು, ನೆರೆ ಹಳ್ಳಿಯ ಜಾರಪ್ಪನ ಮಗ ರಾಮನಿಗೆ ತನ್ನ ಮಗಳು ಉಮ್ಮುವನ್ನು ಧಾರೆಯೆರೆದುಕೊಟ್ಟ. ರಾಮನು ಕರ್ರಗಿನವನಾದರೂ ಸುಂದರ. ಆದರೆ ವ್ಯಭಿಚಾರಿ. ಕುಡುಕನೂ ಆಗಿದ್ದ. ಮಾತ್ರ ಹಿರಿಯರು ಮಾಡಿಟ್ಟ ಆಸ್ತಿ ಬದುಕು ಸ್ವಲ್ಪ ಮಟ್ಟಿಗೆ ಇತ್ತು. ಇದನ್ನು ನೋಡಿಯೇ ಸುಬ್ಬ ತನ್ನ ಒಬ್ಬಳೇ ಮಗಳನ್ನು ಅವನಿಗೆ ಕೊಟ್ಟುದು. ಆದರೆ ಮದುವೆಯಾಗಿ ಒಂದು ವರ್ಷದೊಳಗೆ—ಒಂದೇ ಒಂದು ವರ್ಷದೊಳಗೆ—ಇದ್ದುದು ಬದ್ದುದನ್ನೆಲ್ಲಾ ಕಳಕೊಂಡ. ಈ ವ್ಯಥೆಯೊಂದಿಗೆ ಸ್ತ್ರೀಸಂಬಂಧವಾದ ರೋಗವೂ ಹೆಚ್ಚಿ ಕಾಲವಾದನಾತ. ಮಗಳು ಬೇಡವೆಂದರೂ ಒತ್ತಾಯದಿಂದ ಕುಡುಕ ವ್ಯಭಿಚಾರಿಯ ಕೈಹಿಡಿಸಿದುದು ತಂದೆ; ಅದನ್ನು ಬಿಡಿಸಿದುದು ವಿಧಿ!

ವಿಧವೆ ಉಮ್ಮುವನ್ನು ಪುನಃ ಓರ್ವ ಧನವಂತ ಮುದುಕನ ಕೊರಳಿಗೆ ಕಟ್ಟಬೇಕೆಂದು ಹವಣಿಸಿದನು ಇವಳ ತಂದೆ. ಆದರೆ ಉಮ್ಮುವು ಮದುವೆಯ ಮುಂಚಿನ ರಾತ್ರಿ ಹೇಳದೆ ಕೇಳದೆ ಓಡಿಬಿಟ್ಟಿದ್ದಳು.

ಉಮ್ಮುವು ಬೊಂಬಾಯಿಗೆ ತೆರಳಿದಳು. ಅಲ್ಲಿ ಓರ್ವ ಪ್ರಸಿದ್ಧ ಗಾಯಕಿಯ ಆಶ್ರಯ ಪಡೆದಳು. ಕೆಲವು ವರ್ಷಗಳಲ್ಲಿ ಇವಳು ಸಂಗೀತದಲ್ಲಿ ಪ್ರವೀಣೆಯಾದಳು. ಕಚೇರಿ ನಡೆಸತೊಡಗಿದಳು. ಇವಳ ಮೊದಲ ಗಾಯನಕಚೇರಿಯು ಜರಗಿದುದು ಮುಂಬಾಯಿಯ ಜಹಾಂಗೀರ್ ಹೋಲಿನಲ್ಲಿ. ಅಂದಿನ. ಇವಳ ಉತ್ಸಾಹವು ಅತಿಯಾಗಿತ್ತು. ಜನರ ಪ್ರೋತ್ಸಾಹವು ಮಿತಿಮೀರಿತ್ತು

ಆಗ ಪತ್ರಿಕೆಗಳಲ್ಲೆಲ್ಲಾ ಇವಳ ಸಂಗೀತ ಪ್ರೌಢಿಮೆಯ ಸುದ್ದಿಯೆ ಬಹಳ. ಬರೇ ಉಮ್ಮುವಲ್ಲ—ಅವಳೀಗ—ಉಮಾಬಾಯಿ!

ಉಮಾಬಾಯಿಗೆ ಈಗ ೨೫ ವರ್ಷ ಪ್ರಾಯ. ಅವಳ ಸೌಂದರ್ಯ ಸೊಂಪು, ತುಟಿಕೆಂಪು, ಮೈಕಟ್ಟು ಚೊಕ್ಕ, ದೇಹ ಬಿಳುಪು, ಮುಖ ಹೊಳಪು, ದೃಷ್ಟಿ ಚಪಲ, ಮೂಗು ನೊಗ್ಗು, ನಡು ಸಪುರ, ಇವು ಯೋಗಿಯನ್ನಾದರೂ ಭೋಗಾಭಿಲಾಷಿಯನ್ನಾಗಿ ಮಾಡುವಂತಿದ್ದವು. ಈಗ ಅವಳ ಗುರುತುಹಚ್ಚುವುದು ಸಾಗದ ಕಾರ್ಯ; ಆಗದ ಮಾತು. ಇಂತಹುದರಲ್ಲಿ ಪ್ರವಾಸಕ್ಕೆ ತೆರಳಿದ್ದ ನಮ್ಮ ನಿತ್ಯಾನಂದ ತೀರ್ಥರು ಇವಳ ಬಲೆಯೊಳಗೆ ಸಿಲುಕಿದುದು ಹೆಚ್ಚಲ್ಲ, ಮೆಚ್ಚು. ಇವರು ಸ್ವಭಾವತಃ ವಿಷಯಪ್ರೇಮಿಗಳು. ಮಾನವನು ಯೋಗಿಯಿರಲಿ, ಭೋಗಿಯಿರಲಿ ಎಂದಿನ ವರೆಗೆ ತನ್ನ ಕಾಮ ವಾಸನೆಯನ್ನು ಬಚ್ಚಿಡಬಲ್ಲನು? ಮುಚ್ಚಿಡಬಲ್ಲನು? ಮೇಲಾಗಿ ನಿತ್ಯಾನಂದರು ಗಾಯನಪ್ರಿಯರು. ಆದಕಾರಣ ಬೊಂಬಾಯಿಯಲ್ಲಿ ಇಳಿದಿದ್ದ ಇವರು ವೇಷಪಲ್ಲಟಿಸಿ ಉಮಾಬಾಯಿಯ ಗಾಯನಕಚೇರಿಗೆ ತೆರಳಿದ್ದರು. ಇವರು ಪ್ರವಾಸ ಮುಗಿಸಿ ಊರಿಗೆ ಬರುವಾಗ ಬಹು ಪ್ರಯಾಸದಿಂದ ಉಮಾಬಾಯಿಯನ್ನು ಕಟ್ಟಿಕೊಂಡೇ ಬಂದರು.

ಉಮಾಬಾಯಿಯು ನಮ್ಮೂರಿಗೆ ಬರುತ್ತಲೆ ಆವಳು ಉಮಾದೇವಿಯಾಗಿ ರೂಪಾಂತರ ಹೊಂದಿದಳು. ಇಲ್ಲಿ ಅವಳ ಹಲವು ಕಚೇರಿಗಳು ಜರಗಿದುವು. ಒಂದು ದಿನ ಮುಕುಂದರಾಯರಲ್ಲಿ! ಇನ್ನೊಂದು ದಿನ ಗೋವರ್ಧನ ಶಾಸ್ತ್ರಿಗಳಲ್ಲಿ! ಮತ್ತೊಂದು ದಿನ "ಮಾರುತ ಮಹಲಿ"ನಲ್ಲಿ! ಒಂದು ದಿನ ಊರದೇವಸ್ಥಾನದ ಪೌಳಿಯಲ್ಲಿ! ಎಲ್ಲಕ್ಕೂ ಪ್ರೋತ್ಸಾಹ ಬಹಳ.

ಇಂದು ನಿತ್ಯಾನಂದ ತೀರ್ಥರ ಮಠದಲ್ಲಿ ಖಾಸಗಿ ಗಾಯನಕಚೇರಿ. ಇತರ ಕಡೆಗಳಂತೆ "ಪಬ್ಲಿಕ್" (Public) ಅಲ್ಲವಿದು. ಆಮಂತ್ರಿತರಿಗೆ ಮಾತ್ರ ಪ್ರವೇಶ. ಗಾಯನ ಮುಗಿದ ಮೇಲೆ ಉಚಿತ ಉಡುಗರೆಗಳು ಬಂದುವು—ಗಾಯಿಕೆದೇವಿಗೆ! ಜರತಾರಿ ಸೀರೆ, ಕುಪ್ಪಸ, ಕಂಠಹಾರ ಇತ್ಯಾದಿ. ಆಗಂತುಕರು ಹಿಂತಿರುಗಿ ಹೋದಮೇಲೆ ಉಪಾಹಾರ ಸತ್ಕಾರವೂ ನಡೆಯಿತು. ಪರಸ್ಪರ ಸಮೀಪದಲ್ಲೆ ಕುಳಿತು ತಿಂಡಿತೀರ್ಥಗಳ ಸ್ವೀಕಾರವಾಯಿತು. ಅಂದಿನ ರಾತ್ರಿಯು ಸುಖವಾಗಿ ಕಳೆದುಹೋಯಿತು.

೨

ಉಮಾದೇವಿಯು ಮುಂದಕ್ಕೆ ಪ್ರಯಾಣವನ್ನು ಬೆಳೆಸಲಿಲ್ಲ. ನಮ್ಮೂ ರಲ್ಲಿಯೆ ವಾಸಿಸಹತ್ತಿದಳು. ನಿಮ್ಮ ಮನಸೆಳೆವ ಬ್ರಹ್ಮಗಿರಿಯ ಆ ಸೌಧಾ ಗ್ರಹವೇ ಅವಳ ವಸತಿ. ಅದನ್ನು ಕಟ್ಟಿಸಿಕೊಟ್ಟವರು ನಿತ್ಯಾನಂದರೆಂದು ಜನರ ಮಾತು. ಅದು ಸುಳ್ಳೆಂದು ನಾನು ನಂಬಲಾರೆ.

**ಇಂದು** ಉಮಾದೇವಿಯು ನಿತ್ಯವೂ ನಮ್ಮೂರ ಅದೇ ದೇವಸ್ಥಾನಕ್ಕೆ ಹೋಗುತ್ತಾಳೆ! ದೇವದರ್ಶನ ಮಾಡುತ್ತಾಳೆ! ಆದರೆ ತಡೆವವರಿಲ್ಲ: ಹಿಡಿದು ಹೊಡೆವವರಿಲ್ಲ! ನಿತ್ಯಾನಂದರೆ ಕೊಡುತ್ತಾರೆ—ಅವಳಿಗೆ ಗಂಧಪ್ರಸಾದ! ದೇವರ ದರ್ಶನಕ್ಕಿಂತಲೂ ಹೆಚ್ಚಿನ ಪ್ರಮೋದವು ದೇವೀದರ್ಶನದಲ್ಲಿ—ತೀರ್ಥ ರಿಗೆ. ಅವಳ ಚಪಲದೃಷ್ಟಿಯು ಇವರ ಅಚಲ ಮನಸ್ಸನ್ನಾದರೂ ಒಮ್ಮೊಮ್ಮೆ ಕುದುರಿಸಿಬಿಡುವುದುಂಟು. ಇಲ್ಲವಾದರೆ ಕೊಡೆನೆಂದು ಹೇಳಿದ ನಿತ್ಯಾನಂದರೆ "ಡಿಪ್ರೆಸ್ಡ್ ಕ್ಲಾಸ್ ಮಿಶ್ಶನಿ"ಗೆ ೫೦೦ ರೂಪಾಯಿಗಳನ್ನು 'ಠಣ್ ಠಣ್' ಎಂದು ಸುರುವುತ್ತಿದ್ದರೇ?

ಇಂತಿರಲು ದೇಶದಲ್ಲೆಲ್ಲಾ ಹರಿಜನ ದೇವಸ್ಥಾನಪ್ರವೇಶ ಚಳವಳ ವೆದ್ದಿತು. ಈ ಹೊಸ ಭೂತವು ನಮ್ಮೂರಿಗೂ ಕಾಲುಚಾಚಿತು. ನಮ್ಮೂರಲ್ಲಿ ಪ್ರಬಲ ಜನಜಾಗೃತಿಯೊಂದಿಗೆ ದೇವಸ್ಥಾನ ಪ್ರವೇಶ ಸತ್ಯಾಗ್ರಹವೂ ಆರಂಭ ವಾಗಿಯೆ ಹೋಯಿತು. ಇದರಿಂದ ಕಳವಳಗೊಂಡವರು ಚಳವಳಗಾರರನ್ನು ಸದೆಬಡಿಯಲು ಎದುರೊಡ್ಡಿದ ಕೃತ್ರಿಮೋಪಾಯಗಳು ಸೂರ್ಯನಿದಿರ ಮಂಜಿ ನಂತೆ ಕರಗಿ ನೀರಾದುವು. ಚಳವಳವು ನೋಡನೋಡುತ್ತ ಪ್ರಬಲವಾಗಿ ಬಿಟ್ಟಿತು. ನಿತ್ಯಾನಂದರೂ ಅವರ ಅನುಯಾಯಿಗಳಲ್ಲಿ ಕೆಲವರೂ ತಬ್ಬಿಬ್ಬಾಗಿ ಹೋದರು.

ರಾತ್ರಿಕಾಲ! ಮಠದ ಮಾಳಿಗೆಯ ಅಂತರಂಗ ಕೊಠಡಿಯಲ್ಲಿ ಮಂತ್ರಾ ಲೋಚನೆ ನಡೆಯುತ್ತಿದೆ. 'ದೇವೀತೀರ್ಥ'ರೆ ಚರ್ಚಕರು.

"ಅದೆಲ್ಲಾ ಇರಲಿ. ನೀವು ಇಷ್ಟೊಂದು ಗಲಿಬಿಲಿಯಾಗುವುದೇಕೆ? ವಿಚಾರಪರರಾಗಿರಿ. ದೇವರಿಗೆ ಸ್ಪೃಶ್ಯಾಸ್ಪೃಶ್ಯ ಭೇದವಿದೆಯೆ? ಅವನಿಗೆ ಎಲ್ಲರೂ ಸರಿಸಮಾನ. ಎಲ್ಲರಲ್ಲೂ ಅವನ ಅಂಶವಿದೆ."

''ಆದರೆ ಹಿಂದಿನ ರೂಢಿ ಕವಚವನ್ನು ಒಮ್ಮೆಯೇ ಕಳಚಿಬಿಡುವು ದೆಂತು?''

''ಅನೈಸರ್ಗಿಕವಾದುದನ್ನು ಎಂದಾದರೂ ಬಿಡಲೇಬೇಕು. ಇಲ್ಲದಾದರೆ ಅದು ತಾನಾಗಿ ಅಳಿಯುವುದು. ಉಳಿಸಬೇಕಾದರೆ ಬೆಳೆಸುವುದೊಂದೆ ಯುಕ್ತಿ. ಹಿಂದಿನ ರೂಢಿಗಿಂತಲೂ ಇಂದಿನ ಕಾಲಸ್ಥಿತಿಗೆ ಆವಶ್ಯಕವಾದ ಪ್ರಾಜ್ಞ ಬಹುಜನ ಸಮ್ಮತವಾದ ಆಚಾರ ಪದ್ಧತಿಗಳೇ ಮಿಗಿಲು.''

''ಆದರೂ ಪೂರ್ವಾಚಾರವನ್ನು ಹೇಗೆ ಬಿಡಲಾದೀತು?''

''ನಿಮ್ಮ ಮೇಲಿದ್ದ ನೈಸರ್ಗಿಕ ವಿರುದ್ಧವಾದ ಸಮಾಜ ಕಟ್ಟೊಂದನ್ನು ಮುರಿದು ಸುಧಾರಕರಾಗಿರುವ ನೀವು ಈ ದೇಶಕಾರ್ಯಕ್ಕಾಗಿ ಚಡಪಡಿಸುವ ಅಗತ್ಯವಿಲ್ಲ. ಉಚ್ಚ ವರ್ಣೀಯರೆನಿಸಿ ತುಚ್ಛಕಾರ್ಯವೆಸಗುವ ಚಂಡಾಲರು ದೇವಸ್ಥಾನ ಪ್ರವೇಶಿಸುವುದಿಲ್ಲವೇ''?

''ಆದರೆ ಅವರು ಜಾತಿಯಲ್ಲಿ ಮೇಲು.''

''ಜಾತಿಗಿಂತಲೂ ನೀತಿಯು ಶ್ರೇಷ್ಠ. ಅಸ್ಪೃಶ್ಯರು ಜಾತಿಗೆಟ್ಟು ಪರಜಾತಿಗೆ ಸೇರಿ ಕ್ರೈಸ್ತ, ಮುಹಮ್ಮದಿಯ ಮತಾವಲಂಬಿಕರಾದರೆ ನಾವವ ರನ್ನು ಮುಟ್ಟುವುದಿಲ್ಲವೇ?''

''ಸ್ಪರ್ಶಿಸುವುದುಂಟು.''

''ನೀವೇ ಈಗ ಅಸ್ಪೃಶ್ಯಳೆಣಿಸುವವಳೊಡನೆ ಭೋಗತೃಷ್ಣೆಯನ್ನು ನೀಗಿಸಿಕೊಳ್ಳುವುದಿಲ್ಲವೇ?''

''ಯಾರವಳು?''

ನಾನೇ ಅವಳು. ೧೨ ವರ್ಷಗಳ ಹಿಂದೆ ದೇವಸ್ಥಾನ ಪ್ರವೇಶಿಸಿ ದಂಡನೆಗೊಳಗಾಗಿದ್ದ ಆ ನೀಚ ಉಮ್ಮವೇ ನಾನು. ಈಗೇನೆನ್ನುವಿರಿ?''

ನಿತ್ಯಾನಂದರು ನೀರವ. ಉಮಾದೇವಿಯು ತನ್ನ ಎಲ್ಲಾ ವೃತ್ತಾಂತ ವನ್ನು ವಿವರಿಸುವಳು. ತೀರ್ಥರು ವಿಷಣ್ಣವದನರಾಗಿ ತಲೆಬಾಗುವರು. ಅವರ ಕಣ್ಣಿನಲ್ಲಿ ಎರಡು ಹನಿಗಳುದುರಿದವು. ಅವರ ಮನೋರಾಜ್ಯದಲ್ಲಿ ಒಮ್ಮಿಂದೊಮ್ಮೆಯೇ ತೀವ್ರ ಮಾರ್ಪಾಟವುಂಟಾಯಿತು.

''ಉಮಾ! ನೀನೇ ನನ್ನ ಗುರು. ಇದುತನಕವೂ ನಾನು ಮಂದ ಬುದ್ಧಿಯ ಅಂಧನಾಗಿದ್ದೆ. ನಮ್ಮ ಜನರೂ ಪೂರ್ವಾಚಾರವೆಂಬ ರೂಢಿಯು

ಗುಡಿನಲ್ಲಿ ಸೆರೆಯಾಗಿದ್ದರು. ಅವರಾ ಸಮಾಜ ಬಂಧನವನ್ನು ಕಳಚಿ ಅವರನ್ನು ಸ್ವತಂತ್ರವಾಗಿ ಹಾರಾಡಬಿಡುವೆನು. ನಾನು ಅಂತ್ಯಜೋದ್ಧಾರ ಕಾರ್ಯವನ್ನು ಕೈಕೊಳ್ಳುವೆನು. ಆದರೆ ಉಮಾ! ನಾನು **ಅಂದು** ಮಾಡಿದ ಅಪರಾಧವನ್ನು ನೀನು **ಇಂದು** ಆದರೂ ಮನ್ನಿಸುವಿಯಾ?''

''ಬಳೆಗಳನ್ನು ಅಪಹರಿಸಿದ ನೀವೇ ಅವುಗಳನ್ನು ತೊಡಿಸಿರುವಾಗ ಇನ್ನು ನಿಮ್ಮ ದೋಷವೇನಿದೆ? ದೋಷಿಯನ್ನೇ ಪಾವನೆಯಾಗಿ ಸ್ವೀಕರಿಸಿರುವಾಗ ನಿಮ್ಮ ಅಪರಾಧವೆಲ್ಲಿ ಉಳಿಯಿತು?''

''ನಿಶ್ಚಯ, ನಿಶ್ಚಯ. ಯಾವುದಕ್ಕೂ ಹೇಸದ ನನ್ನಂತಹ ದೋಷಿಗಳು ನಾಶವಾಗುವುದೇ ವಾಸಿ.''

* * *

ಮರುದಿನ ಉಮಾದೇವಿಯ ನೇತೃತ್ವದಲ್ಲಿ ದೇವಸ್ಥಾನ ಪ್ರವೇಶ ವಾಯಿತು. ''ತೀರ್ಥರಿಗೆ ಹುಚ್ಚು'' ಎಂದರು ಕೆಲವರು. ''ಕಲಿಕಾಲ! ವಿನಾಶಕಾಲ!'' ಎಂದು ಉದ್ಗರಿಸಿದರು ಹಲವರು. ''ತೀರ್ಥರ ಜನ್ಮಸಾರ್ಥಕ ವಾಯಿತೆ''ಂದು ವಾರ್ತಾಪತ್ರಿಕೆಗಳು ವಾರ್ತೆಕೊಟ್ಟುವು.

ಒಂದು ದಿನ ರೇಗಿದ ಕೆಲವು ಶ್ರದ್ಧಾಳುಗಳು ತೀರ್ಥರನ್ನು ಕೊಲೆಮಾಡಿ ಬಿಟ್ಟರು. ಉಮಾದೇವಿಯು ಸರಿಯಾದ ರುಜುವಾತಿನಿಂದ ಕೊಲೆಪಾತಕಿ ಗಳನ್ನು ದಂಡನೆಗೆ ಗುರಿಪಡಿಸಿದಳು. ಸಾರ್ವಜನಿಕ ಸಭೆ ನೆರೆಸಿ ತನ್ನ ನಿಜ ವೃತ್ತಾಂತವನ್ನೆಲ್ಲಾ ವಿವರಿಸಿದಳು. ಅಂದಿನಿಂದ ಉಮಾದೇವಿಯು ನಮ್ಮೂ ರಲ್ಲಿ ಪೂಜ್ಯಳಾದಳು. ಅವಳು ಸನ್ಯಾಸದೀಕ್ಷೆಯನ್ನು ಕೈಕೊಂಡು ಪತಿತೋ ದ್ಧಾರ ಕಾರ್ಯವನ್ನು ಭರದಿಂದ ಮುಂದೊತ್ತುತ್ತಾ ನಡೆದಳು. ಜಿಲ್ಲೆಯ ಪತ್ರಿಕೆಗಳೆಲ್ಲಾ ಉಮಾದೇವಿಯ ಆತ್ಮಕಥೆಯನ್ನು ಭಾವಚಿತ್ರದೊಂದಿಗೆ ಪ್ರಕಟಿಸಿ ಅವಳನ್ನು ಬಹಳ ಕೊಂಡಾಡಿದುವು.

# "ಕಿರಿಯರ ಪ್ರಪಂಚದ"
## "ತೊದಲ್ನುಡಿ" ಗ್ರಂಥಮಾಲೆಯ ನಿಯಮಗಳು.

---

೧ ಸಮಾಜ ಸುಧಾರಣೆಗೂ ಭಾಷಾಭಿವೃದ್ಧಿಗೂ ಸಹಕಾರಿಗಳಾದ ಸಣ್ಣ ಪುಟ್ಟ ಕಥೆ, ಕಾದಂಬರಿ, ನಾಟಕಾದಿಗಳನ್ನು ಬರೆದು ಪ್ರಕಟಿಸುವುದೇ ಗ್ರಂಥಮಾಲೆಯ ಉದ್ದೇಶವು.

೨ ಗ್ರಂಥಮಾಲೆಗೆ ರೂಪಾಯಿ ೧೦ ಕೊಟ್ಟವರು ಆಶ್ರಯ ದಾತರು.

೩ ರೂಪಾಯಿ ೫ ಕೊಟ್ಟವರು ಪೋಷಕರು.

೪ ರೂಪಾಯಿ ೩ ಕೊಟ್ಟವರು ಹಿತಚಿಂತಕರು

೫ ರೂಪಾಯಿ ೨ ಮತ್ತು ರೂ. ೧ ಕೊಟ್ಟವರು ಸಹಾಯಕರು ಮತ್ತು ಪ್ರೋತ್ಸಾಹಕರು.

ವಿ. ಸೂ.— ಇವರೆಲ್ಲರ ಹೆಸರುಗಳನ್ನು ಪ್ರವ್ರ ಸಹಾಯಕ್ಕನುಸಾರವಾದ ಸಂಖ್ಯಾಮಾನದಿಂದ ಗ್ರಂಥಮಾಲೆಯಲ್ಲಿ ಪ್ರಕಟವಾಗುವ ಗ್ರಂಥಗಳಲ್ಲಿ ಪ್ರಕಟಿಸಲಾಗುವುದು; ಅಲ್ಲದೆ ಇವರಿಗೆ ಪುಸ್ತಕಗಳನ್ನು ಅಂತೆಯೇ ಧರ್ಮಾರ್ಥ ಕೊಡಲಾಗುವುದು.

ಕಾರ್ಯದರ್ಶಿ,
"ಕಿರಿಯರ ಪ್ರಪಂಚ" ಉಡುಪಿ, ದ. ಕ.

---

## ಪುಸ್ತಕಗಳು ಮಾರಾಟಕ್ಕೆ ಸಿಗುವ ಸ್ಥಳಗಳು

---

೧ ಕಾರ್ಯದರ್ಶಿ, "ಕಿರಿಯರ ಪ್ರಪಂಚ" ಉಡುಪಿ, ದ. ಕ.

೨ ಪಿ. ಎ. ಪೈ, ಬ್ರದರ್ಸ್, ,,

೩ ಶ್ರೀ ಭಾರತ ವಸ್ತು ಮಂದಿರ, ರಥಬೀದಿ, ,,

೪ ತುಳುನಾಡ್ ಛಾಪಖಾನೆ, ,,

೫ ಕೆನರಾ ಛಾಪಖಾನೆ, ಮಂಗಳೂರು

೬ ನಾಸಿಕದೇವರಾವ್ [illegible]ಸ್. ಶಿಬ್ರೂಕರ್, C/o ಪೊಪ್ಯುಲರ್ ಶೋಪ್, ರೋಜ ಮೋತರೋಡ್, ಫೋರ್ಟ್, ಬೊಂಬಾಯಿ.